ಪಂಚಮ

ಸಂಪುಟ : 3 ಸಂಚಿಕೆ : 13–14 20, ಆಗಸ್ಟ್ 1979 ಪಾಕ್ಷಿಕ ಬೆಲೆ : 20 ಪೈಸೆ

ಸ್ವಾತಂತ್ರ್ಯ ದಲಿತರಿಗಲ್ಲ; ಶೋಷಕರಿಗೆ

ಸ್ವಾತಂತ್ರ್ಯ, ಸಮಾನತೆ, ಪ್ರಜಾಪ್ರಭುತ್ವ ಎಂಬ ಎಲ್ಲಾ ಮಾತುಗಳು ಈ ದೇಶದಲ್ಲಿ ಇನ್ನು ಒಂದು ಪೂರ್ಣ ಅರ್ಥಕ್ಕೆ ಬಂದಿಲ್ಲವಾದರೂ ನಿರಂತರವಾಗಿ ರಾಜಕೀಯ ಅಧಿಕಾರಕ್ಕೆ ಗುದ್ದಾಡುತ್ತಿರುವ ರಾಜಕಾರಣಿಗಳು ದೇಶದುದ್ದಗಲಕ್ಕೂ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿರುವುದಾಗಿ ಆಗಸ್ಟ್ 15 ರಂದು ಸುಳ್ಳಿನ ಸರಮಾಲೆಗಳ ಭಾಷಣವನ್ನು ಒಂದೆಡೆ ಬಿಗಿದರೆ, ಕರ್ನಾಟಕ ದಲಿತ ಸಂಘರ್ಷ ಸಮಿತಿ ಮತ್ತು ಬಂಡಾಯ ಸಾಹಿತ್ಯ ಸಂಘಟನಾ ಸಮಿತಿಯು ಜೊತೆಗೂಡಿ ರಾಜ್ಯಾದ್ಯಂತ ಅಲ್ಲಲ್ಲಿ ತಮ್ಮ ದಲಿತ ಜನಾಂಗದ ನೋವು-ಆಕ್ರೋಶ ತುಂಬಿದ ಪ್ರತಿಭಟನೆ ವ್ಯಕ್ತಪಡಿಸಿ 'ಕಪ್ಪು ದಿನ' 'ಶೋಷಣೆ ವಿರೋಧಿ ದಿನ'ವನ್ನಾಗಿ ಆಚರಿಸಿದವು.

ಅವುಗಳ ಪ್ರತಿಭಟನೆಯ ಪೂರ್ಣಪಾಠ ಈ ಕೆಳಕಂಡಂತಿದೆ.

ಇಂಡಿಯಾ ದೇಶಕ್ಕೆ 'ಸ್ವಾತಂತ್ರ್ಯ' ಬಂದು ಮೂವತ್ತೆರಡು ವರ್ಷಗಳು ತುಂಬಿವೆ. ಆದರೆ ಈ ದೇಶದ ಬದುಕಿಗೆ ಗರ ಬಡಿದಿದೆ; ದಲಿತರ ಹಟ್ಟಿಗಳಲ್ಲಿ ನೋವು ಹೆಪ್ಪುಗಟ್ಟಿದೆ; ಕಾರ್ಖಾನೆಯ ಕೊಳವೆಗಳಲ್ಲಿ ಕಾರ್ಮಿಕರ ನಿಟ್ಟುಸಿರು ಕಪ್ಪಾಗಿ ಹೊಮ್ಮುತ್ತಿದೆ. ಬೀದಿ ಬೀದಿಯಲ್ಲಿ ಭಿಕ್ಷೆ ಬೇಡುವ ನಮ್ಮವರ ನಾಲಗೆಯಲ್ಲಿ ಇಂಡಿಯಾ ಸತ್ತಿದೆ. ಎಲ್ಲೆಂದರಲ್ಲಿ ಕಾಣುವ ಮಾಸಿದ ಮುಖ. ಹರಿದ ಅಂಗಿಗಳಲ್ಲಿ ಇಂಡಿಯಾದ ಅಧಿಕೃತ ಮುದ್ರೆಯಿದೆ. ಆದರೂ ಇಲ್ಲಿ ಹೇಳುತ್ತಾರೆ: 'ನಮಗೆ ಸ್ವಾತಂತ್ರ್ಯ ಬಂದಿದೆ' ಎಂದು. ಹಾಗಾದರೆ ಯಾರಿಗೆ ಬಂದಿದೆ? ಕಂಡ ಕಂಡವರನ್ನು ತುಳಿದು ಕೊಬ್ಬುತ್ತಿರುವವರಿಗೆ; ಜನತೆಯ ಹೆಸರಿನಲ್ಲಿ ಎಲ್ಲ ಸ್ವಾತಂತ್ರ್ಯವನ್ನು ತಮಗಾಗಿ ತಿರುಗಿಸಿಕೊಳ್ಳುವ ಆಳುವವರಿಗೆ; ಎಲ್ಲ ರೀತಿಯ ಶೋಷಕರಿಗೆ. ಇಲ್ಲಿ ಬಡವರಿಗೆ ಬದುಕೇ ಇಲ್ಲ; ದಲಿತರಿಗೆ ದಾರಿಯೇ ಇಲ್ಲ.

ನಮ್ಮ ದೇಶದಲ್ಲಿರುವ ಅರವತ್ತು ನಾಲ್ಕು ಕೋಟಿ ಜನರಲ್ಲಿ ಮೂವತ್ತು ನಾಲ್ಕು ಕೋಟಿಗೂ ಹೆಚ್ಚು ಜನರು ಹೊಟ್ಟೆ ಬಟ್ಟೆಗಿಲ್ಲದೆ, ಮಲಗಲು ಮನೆಯಿಲ್ಲದೆ, ಬಡತನದ ರೇಖೆಯಿಂದ ಕೆಳಗಿದ್ದಾರೆ. ನೂರಕ್ಕೆ ಐವತ್ತೈದು ಕುಟುಂಬಗಳು ತಿಂಗಳಿಗೆ ಸರಾಸರಿ ಹದಿನೈದು ರೂಪಾಯಿ ಸಂಪಾದಿಸಲು, ಒಟ್ಟು ಕುಟುಂಬವನ್ನು ಜೀವ ಸಹಿತ ಉಳಿಸಿಕೊಳ್ಳಲು ಹೋರಾಡುತ್ತಿವೆ. ಸರ್ಕಾರದ ಹೇಳಿಕೆಯ ಪ್ರಕಾರವೇ

[ಕೊನೆಯ ಪುಟ ನೋಡಿ]

ತಾತಗುಣಿ ಎಸ್ಟೇಟ್ ಕಾರ್ಮಿಕರ ಶೋಷಣೆ ಕೊನೆ ಎಂದು ?

ವರದಿ : ಜನಾರ್ಧನ

ಬೆಂಗಳೂರಿನಿಂದ 10 ಕಿ. ಮೀ ದೂರದ ಕನಕಪುರ ರಸ್ತೆ ಬದಿಯಲ್ಲಿ ಸುಮಾರು 800 ಎಕರೆ ಸವಿಸ್ತಾರ ಪ್ರದೇಶದಲ್ಲಿ ಅಮೋನಿಯಾ ಸೆಂಟ್ ತಯಾರಿಸುವ ತಾತಗುಣಿ ಎಸ್ಟೇಟ್ ಇದೆ. ಇದರ ಒಡೆತನ ಪ್ರಖ್ಯಾತ ಕಲಾವಿದ ರೋರಿಚ್ ಮತ್ತು ಮತ್ತು ಪತ್ನಿ ದೇವಿಕಾರಾಣಿ ಅವರದು. ಇಲ್ಲಿನ ಬಹುತೇಕ ದಲಿತ ಕಾರ್ಮಿಕರ ಸಶ್ರಮದ ದುಡಿಮೆಯಿಂದ ತಯಾರಿಸುವ ಅಮೋನಿಯಾ ಸೆಂಟನ್ನು ಅವರು ವಿದೇಶಗಳಿಗೆ ರಫ್ತು ಮಾಡಿ ಯಥೇಚ್ಛವಾಗಿ ಹಣಗಳಿಸುತ್ತಿದ್ದಾರೆ. ಈ ಭಾರಿ ವ್ಯವಹಾರದಿಂದ ಲಕ್ಷಾಂತರ, ಕೋಟಿ ರೂ. ಗಳ ವಿದೇಶಿ ಲಾಭಗಳಿಕೆ ಇದ್ದರು ಇಲ್ಲಿ ಕೆಲಸಮಾಡುವ ಬಹುತೇಕ ಬಡ ಹರಿಜನ ಕಾರ್ಮಿಕರ ಮೇಲೆ ಅವ್ಯಾಹಿತವಾದ ಶೋಷಣೆ ಮುಂದುವರಿಯುತ್ತಿದೆ.

ಮುವತ್ತು ವರ್ಷದ ಹಿಂದೆ ಈ ಎಸ್ಟೇಟಿನ ಮಾಲೀಕತ್ವವನ್ನು ಪಡೆದ ರೋರಿಚ್ ಮತ್ತು ದೇವಿಕಾರಾಣಿ 1928 ರಲ್ಲಿ 110 ಹರಿಜನ ಕಾರ್ಮಿಕ ಕುಟುಂಬಗಳನ್ನು ಊಟಿಯಿಂದ ಕರೆತಂದು ದುಡಿಸಿಕೊಂಡು ದುಡ್ಡುಗಳಿಸುತ್ತಿದ್ದಾರೆ.

ಶೋಷಣೆ ವಿರುದ್ಧ ದನಿ

ತಮ್ಮ ಮುವತ್ತು ವರ್ಷಗಳ ದುಡಿಮೆಯಲ್ಲಿ ಕಿಂಚಿತ್ತಾದರೂ ಬದುಕು ಬದಲಾಗದಿದ್ದ ಕಾರಣ ಕಾರ್ಮಿಕರು ಸಂಘ ಕಟ್ಟಿಕೊಂಡು ಒಡೆಯರ ಶೋಷಣೆ ವಿರುದ್ಧ ದನಿ ಎತ್ತಲು ನಿರ್ಧರಿಸಿದರು. ಅಂತಯೇ ತುರ್ತುಪರಿಸ್ಥಿತಿಯಲ್ಲಿ ಘೋಷಿಸಲಾದ 20 ಆರ್ಥಿಕ ಅಂಶ ಕಾರ್ಯಕ್ರಮದಲ್ಲಿ "ಕನಿಷ್ಟ ಕೂಲಿ; ಕಾರ್ಮಿಕರ ಕೆಲಸದ ಭದ್ರತೆ"ಯೂ ಸೇರಿತ್ತು, ಸಂಘ ಕಟ್ಟಬೇಕೆಂದಿದ್ದ ಕಾರ್ಮಿಕರಿಗೆ ಇದು ಸ್ವಲ್ಪ ಧೈರ್ಯ ತಂದುಕೊಟ್ಟಿತು. ಅನೇಕ ಬೇಡಿಕೆಗಳನ್ನು ಸಿದ್ಧಪಡಿಸಿ ಎಸ್ಟೇಟಿನಲ್ಲೇ ಕಾರ್ಮಿಕ ಸಂಘವೊಂದನ್ನು ಕಟ್ಟಿದರು. ಆದರೆ ಇಂದಿರಾರ 20 ಆರ್ಥಿಕ ಅಂಶದ ಘೋಷಣೆ ಕಾರ್ಯರೂಪದಲ್ಲಿ ತದ್ವಿರುದ್ಧವಾಗಿತ್ತು. ಬಡ ಹರಿಜನ ಕಾರ್ಮಿಕರ ಮೂಲಭೂತ ಬೇಡಿಕೆಗಳಿಗಾಗಿ ಹೋರಾಟದ ಮುಂಚೂಣಿಯಲ್ಲಿದ್ದ ರೈತ ಸಂಘದ ಮುಖಂಡರುಗಳನ್ನು ಜೈಲಿಗೆ ತಳ್ಳಲಾಯಿತು. ಎಸ್ಟೇಟ್ ಒಡೆಯರು ಪೋಲೀಸ್ ಮತ್ತು ಸರ್ಕಾರದ ನೆರವಿನಿಂದ ಬಡ ಕಾರ್ಮಿಕರ ಹೋರಾಟವನ್ನು ದಮನಗೊಳಿಸುವ ಸತತ ಯತ್ನ ನಡೆಸಿದರು.

[ಕೊನೆಯ ಪುಟ ನೋಡಿ]

ಓದುಗರ ಪತ್ರ

ಡೆಕ್ಕನ್ ಶಾಲೆ: ದಲಿತ ವಿದ್ಯಾರ್ಥಿಗಳಿಂದ ಅಕ್ರಮ ಫೀ ಸುಲಿಗೆ

ಮಾನ್ಯರೆ,

ಬೆಂಗಳೂರು ನಗರದ ಶ್ರೀರಾಮಪುರದಲ್ಲಿರುವ ಡೆಕ್ಕನ್ ಇಂಗ್ಲಿಷ್ ಸ್ಕೂಲ್ ದಲಿತ ವಿದ್ಯಾರ್ಥಿಗಳ ಶೋಷಣೆಕೇಂದ್ರವಾಗಿದೆ. ಅಲ್ಲಿ ನನ್ನ ಮಗಳನ್ನು (ಭುವನೇಶ್ವರಿ) ವ್ಯಾಸಂಗಕ್ಕಾಗಿ ಎರಡು ವರ್ಷಗಳ ಹಿಂದೆಯೇ ಸೇರಿಸಿದೆ. ಪ್ರತಿತಿಂಗಳು ಯಾವ ರಸೀತಿ-ಲೆಕ್ಕಾಚಾರ ಕೊಡದೆ ಅಧಿಕ ಫೀ ವಸೂಲಿ ಮಾಡಲಾಗುತ್ತಿತ್ತು. ಈ ಶಾಲೆಯ ಆಡಳಿತ ಹೊಣೆಯು ವಕೀಲರಾಗಿರುವ ರಾಮು ಎಂಬುವವರ ಕಾರ್ಯದರ್ಶಿತ್ವದಲ್ಲಿದೆ.

ಈ ವರ್ಷ ನನ್ನ ಮಗಳನ್ನು upper nursery ಗೆ ಸೇರಿಸಿದೆ. ಸೇರುವಾಗ 105 ರೂ. ಫೀ ಕೇಳಿದರು. ನಾನು ಫೀಗೆ ರಸೀತಿ ಕೊಡಬೇಕೆಂದು ಕೇಳಿದೆ. ಬಹಳ ತಕರಾರು ಮಾಡಿ ಕೊನೆಗೆ ಕೇವಲ ಹೆಬ್ಬೆರಳಿನ ಅಗಲದಷ್ಟು ಖಾಲಿ ಚೀಟಿಯೊಂದರಲ್ಲಿ ಭುವನೇಶ್ವರಿ ಎಂದು 105 ರೂ. ಗೆ ರಸೀತಿ ಎಂದು ಕೊಟ್ಟರು. ಮತ್ತೆ ಕೆಲವೊಮ್ಮೆ ನನ್ನ ಹೆಸರಿಗೆ ಸಹಾಯಧನದ ಹೆಸರಿನ ರಸೀತಿ ಕೊಟ್ಟರು. ಎರಡನೇ ಬಾರಿ ಫೀ ಕಟ್ಟಿದಾಗಲೂ ಚೀಟಿ ಬದಲು ರಸೀತಿಗಾಗಿ ಆಗ್ರಹಪಡಿಸಿದೆ. ಅದಕ್ಕೆ "ನಾವು ಕೊಡಲ್ಲ. ಬೇಕಾದ್ರೆ ಇದನ್ನ ತಗೊಳ್ಳಿ ಇಲ್ಲ ಅಂದ್ರೆ ಬಿಡ್ರಿ" ಅಂದರು. ನನ್ನ ಮನವಿಗೆ ಪುರಸ್ಕಾರ ದೊರೆಯಲಿಲ್ಲ. ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಸರ್ಕಾರ ಫೀ ವಿನಾಯಿತಿ ನೀಡಿದ್ದರು ಏಕೆ ಇಷ್ಟೊಂದು ದುಬಾರಿ ಫೀ ವಸೂಲಿ ಮಾಡುತ್ತೀರೆಂದು ಕೇಳಿದರೆ 'ನಾವು ಹಾಗೆಯೇ ಮಾಡುವುದು' ಎಂಬ ಉತ್ತರ. ಸರಿ ಎನಿಸಿ ಸರ್ಕಾರದ ಆಜ್ಞೆ ಮುಂದಿಟ್ಟೆ ಅದಕ್ಕೆ ಬೆಲೆ ಕೊಡಲಿಲ್ಲ.

(G. O. No. ED/ 30 CSS 67 dated 14-3-1968. Uniform rules were laid down for award of fee concessions to the students belonging to SC, ST, OBC. These rules were made applicable to all Govt, local Body, Aided and unaided institutions and also institutions under direct control of universities)

ಇದ್ದಕ್ಕಿಂದಂತೆ ಒಂದು ದಿನ ಶ್ರೀರಾಂಪುರ ಪೋಲೀಸ್ ಠಾಣೆಯಿಂದ ನನಗೆ ಕರೆಬಂತು. ಅಲ್ಲಿಗೆ ಹೋದೆ. ಸುಮಾರು ಎರಡು ಗಂಟೆ ಕಾಲ ಏನೂ ಮಾತಾಡದೆ ಸುಮ್ಮನೆ ಕೂರಿಸಿದ್ದರು. ನಂತರ ಸಬ್‌ಇನ್ಸ್‌ಪೆಕ್ಟರ್ "ನೀವು ಸ್ಕೂಲ್ನತ್ರ ಗಲಾಟೆ ಮಾಡ್ತಿದ್ದೀರಂತೆ; ಈಗ ನಿಮ್ಗೆ warn ಮಾಡ್ತಿದ್ದೀನಿ" ಎಂದರು. ನಮಗೆ ಸ್ಕೂಲಿನಲ್ಲಿ ಆಗುತ್ತಿರುವ ಕಿರುಕುಳವನ್ನೆಲ್ಲ ವಿವರಿಸಿದೆ. ಅಂದು ಸಂಜೆಯೇ ಈ ಬಗ್ಗೆ ಎಲ್ಲಾ ರಸೀತಿ (ಚೀಟಿ) ಮುಂತಾದ ದಾಖಲೆ ಪತ್ರಗಳನ್ನು ತೋರಿಸಿದೆ. "ನೀವು ಕೋರ್ಟ್‌ಗೆ ಹೋಗಿ" ಎಂದರು.

ಈ ನಡುವೆ ಶಾಲೆಯಲ್ಲಿ ನನ್ನ ಮಗಳನ್ನು ಮುಂಭಾಗದ ಬೆಂಚಿನಿಂದ ಹಿಂದೆ ಒಂಟಿಯಾಗಿ ಕೂರಿಸಿ ಆಕೆಯ ಬಗ್ಗೆ ಅಲಕ್ಷ್ಯ ತೋರುವ ಕೆಲಸ ಆರಂಭವಾಗಿತ್ತು.

ಈ ಎಲ್ಲಾ ವಿಚಾರಗಳ ಬಗ್ಗೆ ಮತ್ತೆ ಶಾಲೆ ನಡೆಸುತ್ತಿರುವ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ವಕೀಲ ರಾಮು ಅವರ ಬಳಿ ಚರ್ಚಿಸಲು ಹೋದೆ. ನನ್ನ ಕಂಡಕೂಡಲೇ ಮುಖಸಿಂಡರಿಸಿಕೊಂಡ ಅವರು "ಇದನ್ನೆಲ್ಲ ಕೇಳೋಕಾಗಲ್ಲ ನೀವು 10 ಜನ ಕರ್ಕೊಂಡು ಬಂದ್ರೆ ನಾನು ಸಾವಿರ ಜನ್ರ ಕರ್ಕೊಂಡು ಬರ್ತೀನಿ" ಎಂದರು. ಅದಕ್ಕೆ ನಾನು "ನಿಮ್ಮ ಜೊತೇಲಿ ಕುಸ್ತಿ ಮಾಡೋಕೆ ಬಂದಿಲ್ಲ; ನ್ಯಾಯಾ ಕೇಳೋಕೆ" ಎಂದೆ.

ಇಂಥ ಶೋಷಣಾ ಕೇಂದ್ರದಲ್ಲಿ ನನ್ನ ಮಗಳ ಭವಿಷ್ಯವಾದರೂ ಎಂಥದ್ದು ? ಎಂದು ಅನಿವಾರ್ಯವಾಗಿ ಈಗ ಆ ಶಾಲೆ ಬಿಡಿಸಿ ಬೇರೆ ಶಾಲೆಗೆ ಸೇರಿಸಬೇಕಾಯಿತು. ಆದರೆ ಈ ಎಲ್ಲಾ ಅನ್ಯಾಯ ಶೋಷಣೆಗೆ ನನ್ನ ಮಗಳೊಬ್ಬಳೇ ಗುರಿಯಾಗಲಿಲ್ಲ. ಅಲ್ಲಿ ಇನ್ನೂ ವ್ಯಾಸಂಗ ಮಾಡುತ್ತಿರುವ ಹಲವಾರು ದಲಿತ ಮಕ್ಕಳು ಇದ್ದಾರೆಂಬುದು ಗಮನಿಸಬೇಕಾದ ಮುಖ್ಯ ವಿಚಾರ.

—ಕೃಷ್ಣಮೂರ್ತಿ
ಬೆಂಗಳೂರು.

ದಲಿತ ನುಡಿ

ಸಮಾಜದಲ್ಲಿನ ದೀನ ದಲಿತರ ಉದ್ಧಾರವಾಗದೆ - ಅದನ್ನು ಪ್ರಜಾಸತ್ತಾತ್ಮಕ ಸರ್ಕಾರ ಎಂದು ಹೇಳಿಕೊಳ್ಳುವುದು ನಮ್ಮನ್ನು ನಾವೇ ವಂಚಿಸಿಕೊಂಡಂತಾಗುತ್ತದೆ. ಪ್ರಜಾಪ್ರಭುತ್ವದ ಭದ್ರ ತಳಪಾಯ ಎಂದರೆ ಆ ಸಮಾಜದಲ್ಲಿನ ತೀರಾ ಕೆಳಹಂತದಲ್ಲಿರುವ ದೀನರ ಉದ್ಧಾರ.

—ಅಂಬೇಡ್ಕರ್.

ಕೆಂಪು ಸೂರ್ಯ

ಎಲ್ಲಿದ್ದರೋ ಅವರು ಯಾಂಗಿದ್ದರೋ ಅವರು
ಎಚ್ಚೆತ್ತ ಸಿಂಹಗಳು ನನ್ನ ಜನರು
ಎಷ್ಟು ಲೋಕದ ಕನಸ ಕಾಣುತಿದ್ದರೊ ಅವರು
ಎದ್ದ ಬಿರುಗಾಳಿಗಳು ನನ್ನ ಜನರು

ಯಾವ ಮಾಯದ ನಿದ್ದೆ ಕವಿದಿತ್ತು ಇವರನ್ನು
ಯಾವ ಉಕ್ಕಿನ ಸರಳು ಬಿಗಿದಿತ್ತು ಇವರ
ಯಾವ ಬಣ್ಣದ ಬೀಗ ಮುಚ್ಚಿತ್ತು ಬಾಯನ್ನು
ಯಾವ ಮೋಡದ ಹಿಂಡು ತಡೆದಿತ್ತು ಬೆಳಕ

ಸಾಹುಕಾರರ ಬಲೆಗೆ ಪಾರಿವಾಳಗಳಂತೆ
ಸಿಕ್ಕಿ ಸುಸ್ತಾದಂಥ ನನ್ನ ಜನರು
ಎಲ್ಲರೂ ತಲೆಯೆತ್ತಿ ಬಲಿಯೊಡನೆ ಹಾರಿದರು
ಎದುರಾದ ಮೋಡಗಳ ಸೀಳಿಕೊಂಡು

ದಟ್ಟ ಅಡವಿಯ ನಡುವೆ ಬಿದ್ದಂಥ ಬೀಜಗಳು
ಹೂವಾಗಿ ಊರೊಳಗೆ ಬಂದವಲ್ಲೊ
ಹೂವ ಮುಡಿಯುವ ಧೈರ್ಯ ಊರ ದೇವತೆಗಿಲ್ಲ
ಕ್ರಾಂತಿ ಕನ್ಯೆಯ ಕಣ್ಣ ಸೆಳೆದವಲ್ಲೊ

ಇಪ್ಪತ್ತು ಅಂಶಗಳ ಒಪ್ಪೊತ್ತಿನೂಟದಲಿ
ಸೊರಗಿ ಉಚ್ಚಳ್ಳು ಕಡ್ಡಿಯಾಗಿ
ಬೆಂದು ಬಳಲಿದ ಜನರು ಕೆಂಪು ಸೂರ್ಯನ ಕಂಡು
ಹಬ್ಬದೂಟಕೆ ಎದ್ದು ನಿಂತರಲ್ಲೊ

—ಸಿದ್ದಲಿಂಗಯ್ಯ

ಪಿರಿಯಾಪಟ್ಟಣ: ಜೀತಗಾರನ ಮೇಲೆ ಅಮಾನುಷ ಹಲ್ಲೆ

ವರದಿ : ಹರಿಹರ ಆನಂದ ಸ್ವಾಮಿ

ಪಿರಿಯಾಪಟ್ಟಣ ತಾಲ್ಲೂಕು ತರೀಕಲ್ ಗ್ರಾಮದಲ್ಲಿ ಸುಮಾರು 40 ಹರಿಜನ ಕುಟುಂಬಗಳಿವೆ. ಎಲ್ಲರೂ ಕೂಲಿ, ಜೀತದಿಂದ ಬದುಕುತ್ತಿದ್ದಾರೆ. ಇತ್ತೀಚೆಗೆ ಹರಿಜನ ಜೀತದಾಳು ಒಬ್ಬನ ಮೇಲೆ ಇಲ್ಲಿ ಅಮಾನುಷವಾದ ದೌರ್ಜನ್ಯವೊಂದು ನಡೆಯಿತು:

ತರೀಕಲ್ ಗ್ರಾಮದ ಕುನ್ನಯ್ಯ ಮತ್ತು ಆತನ ತಮ್ಮ ತಮ್ಮಣ್ಣ ಎಂಬುವರು ಹಳೆಯೂರು ಗ್ರಾಮದ ಲಕ್ಕೇಗೌಡನ ಮನೆಯಲ್ಲಿ 420 ರೂ. ಗಳಿಗೆ ಜೀತದಾಳುಗಳು. ಕುನ್ನಯ್ಯ ವಿವಾಹಿತ. ಆದರೂ ಗೇಣುದ್ದ ಹೊಟ್ಟೆಗಾಗಿ ಮತ್ತು ಯಾವುದೋ ಸಂದರ್ಭದಲ್ಲಿ ಪಡೆದ ಸಾಲಕ್ಕಾಗಿ ಗೌಡನ ಹಟ್ಟೀಲಿ ಜೀತಗಾರಿಕೆ.

'ಜೀತಕ್ಕೇ ಬಾರೋ'

ಈಗ್ಗೆ ಕೆಲವು ದಿನಗಳ ಹಿಂದೆ ಹುಷಾರಿಲ್ಲದ ಕಾರಣ ಕುನ್ನಯ್ಯ ಎರಡು ದಿನ ಜೀತಕ್ಕೆ ಹೋಗದೆ ಮನೆಯಲ್ಲೇ ಉಳಿದ. ಮರು ದಿನ ಅಂದರೆ ಜುಲೈ 30 ರಂದು ಲಕ್ಕೇಗೌಡನು(ಜೀತಕ್ಕೆ ಇರಿಸಿಕೊಂಡಿರುವವನು) ಮನೆ ಹತ್ತಿರ ಬಂದು ಗತ್ತಿನಿಂದ "ಲೋ ಕುನ್ನ ಜೀತಕ್ಕೆ ಬಾರೋ" ಎಂದ. ಮನೆಯಿಂದ ಹೊರಗೆ ಬಂದ ಕುನ್ನಯ್ಯ "ಸ್ವಾಮಿ ಉಸಾರಿಲ್ಲ ನಾಳೆ ಬತ್ತೀನಿ" ಎಂದು ಅಂಗಲಾಚಿ ಬೇಡಿಕೊಂಡು ತನ್ನ ಮನದ ದುಃಖ ತೋಡಿಕೊಂಡ. ಇದೊಂದ್ಸಲ ಅವಕಾಶಕೊಡಿ, ಕೆಲ್ಸಕ್ಕೆ ಬರೋದು ಕಷ್ಟ ಸ್ವಾಮಿ ಎಂದು ಮತ್ತೆ ಮತ್ತೆ ಬೇಡಿ ಕಾಡಿದ. ಅದಕ್ಕೆ ಗೌಡ "ಎಲಾ ಮಾದ್ಗ ಬೋಳಿಮಗ್ನೆ ನಾನೇನು ದುಡ್ಡು ಕೊಟ್ಟಿಲ್ವ ; ನಾಳೆ ಬತ್ತೀನಿ ಅಂತಿಯಲ್ಲ" ಎಂದು ಅನ್ನ ಮೆಟ್ಟುಗಾಲಿನಲ್ಲಿ ಒದ್ದ. ಅಷ್ಟರಲ್ಲಿ ಗುಂಪಾಗಿ ಬಂದ ಪುಟ್ಟೇಗೌಡ, ತಿಮ್ಮೇಗೌಡ ರಾಮಚಂದ್ರ, ದೊಡ್ಡೇಗೌಡ, ಚಿಕ್ಕನೆರಲೆ ಪಂಚಾಯಿತಿ ಉಪಾಧ್ಯಕ್ಷ ಅಣ್ಣೇಗೌಡ ಮುಂತಾದವರು ಲಕ್ಕೇಗೌಡನ ಜತೆಗೂಡಿ ಕುನ್ನಯ್ಯನನ್ನು ಹಿಗ್ಗಾಮುಗ್ಗಾ ಎಳೆದಾಡಿ ಹೊಡೆಯಲಾರಂಭಿಸಿದರು. ನರರಾಕ್ಷಸರ ಕೈಯಿಂದ ತನ್ನ ಗಂಡ ಕುನ್ನಯ್ಯನನ್ನು ಪಾರುಮಾಡಲು ಲಬೋ ಲಬೋ ಎಂದು ಅಳುತ್ತ ಬಂದ ಹೆಂಡತಿ ಕಾಳಮ್ಮಳನ್ನು ಅವರು ಹೊಡೆದು ಗಾಯಗೊಳಿಸಿದರು. ಮೊದಲೇ ಹುಷಾರಿಲ್ಲದ ಕುನ್ನಯ್ಯ ಮತ್ತು ಕಾಳಮ್ಮ ಬಲವಾದ ಹೊಡೆತಗಳಿಂದ ಪ್ರಜ್ಞೆ ತಪ್ಪಿ ಬಿದ್ದರು.

"ನಿಮ್ಮನ್ನೆಲ್ಲ ಸುಟ್ಬುಡ್ತೀವಿ"

ಈ ಅಮಾನವೀಯ ಕ್ರೂರ ಹಿಂಸೆಯನ್ನು ತಡೆಯಲು ಅಸಹಾಯಕರಾಗಿ ತಮ್ಮ ಮನೆ ಬಾಗಿಲ್ ಗಳಲ್ಲೇ ನೋಡುತ್ತಲೇ ನಿಂತಿದ್ದ ಉಳಿದ ದಲಿತರು ಪ್ರಜ್ಞೆ ತಪ್ಪಿದ ಕುನ್ನಯ್ಯನನ್ನು ನೋಡಲು ಬಂದಾಗ ಅವರಿಗೂ ಕಪಾಳ ಮೋಕ್ಷವಾಯಿತು. "ನಿಮ್ಮನ್ನೆಲ್ಲ ಪೆಟ್ರೋಲ್ ಹಾಕಿ ಸುಟ್ಬುಡ್ತಿವಿ ; ಬಡ್ಡಿಮಕ್ಳ ಆಮೇಲ ಏನ್ಮಾಡ್ಕೊತೀರಿ" ಎಂದು ತುಚ್ಛವಾಗಿ ಬೈದು ಹೋದರು.

ಆಡುಕದ್ದ ಆರೋಪ

ಈ ಮಧ್ಯೆ ಹರಿಜನಕೇರಿಯ ತಿಮ್ಮಯ್ಯ ಎಂಬುವವರ ಆಡುಗೆ ಹೊಟ್ಟೆ ಊದುಕೊಂಡಿದ್ದ ಕಾರಣ ಅಂದು ರಾತ್ರಿ ಗೊಟಕ್ ಎಂದಿತು. ತಿಮ್ಮಯ್ಯ ಬೆಳಿಗ್ಗೆ ಆಡನ್ನು ಕೊಯ್ಸಿ ಮಾಂಸ ಮಾರಾಟಕ್ಕೆ ಇಟ್ಟ. ಬಡ ಜನರ ರಕ್ತ ಹೀರಿದ ಲಕ್ಕೇಗೌಡ ಸತ್ತ ಆಡಿನ ಅವಕಾಶ ದುರುಪಯೋಗಪಡಿಸಿಕೊಳ್ಳಲು ಹವಣಿಸಿ ಕುನ್ನಯ್ಯ ತನ್ನ ಮನೇಲಿ ಆಡು ಕದ್ದಿದ್ದಾನೆಂದು ಪೋಲೀಸರಿಗೆ ದೂರು ನೀಡಲು ನಿಶ್ಚಯಿಸಿದ. ಅಂತಯೇ ಹಳೆಯೂರಿನ ರಾಜೇಗೌಡ ಎಂಬುವವನಿಂದ 8 ರೂ. 50 ಪೈಸೆಗೆ ಆಡಿನ ತಲೆ ಕಾಲನ್ನು ತರಿಸಿಕೊಂಡು ಕುನ್ನಯ್ಯ ತನ್ನ ಆಡು ಕದ್ದಿರುವುದಾಗಿ ಪೋಲೀಸ್‌ಗೆ ಸುಳ್ಳು ದೂರು ನೀಡಿ ಕೊಂಡ ಮಾಂಸವನ್ನು ಪೋಲೀಸರಿಗೆ ಒಪ್ಪಿಸಿದ.

ಈ ಸಂಬಂಧದಲ್ಲಿ ದಲಿತ ಸಂಘರ್ಷ ಸಮಿತಿಯ ಪಿರಿಯಾಪಟ್ಟಣ ಶಾಖೆ ಕಾರ್ಯಕರ್ತರು ಮಧ್ಯೆ ಪ್ರವೇಶಿಸಿ ಪೋಲೀಸರಿಗೆ ನಿಜ ಸಂಗತಿ ತಿಳಿಸಲು ಯತ್ನಿಸಿದಾಗ ಅಲ್ಲಿನ ಸಬ್‌ಇನ್‌ಸ್ಪೆಕ್ಟರ್ "ಇದ್ಕು ನಿಮ್ಗೂ ಸಂಬಂಧ ಇಲ್ಲ" ಎಂದು ಲಕ್ಕೇಗೌಡನ ಪರ ಷಾಮೀಲಾಗಿ ಹರಿಜನರಿಗೆ ಕಿರುಕುಳ ಕೊಡಲು ಆರಂಭಿಸಿದ್ದಾರೆ.

ಜೀತಗಾರನಿಗೆ ದಕ್ಕಬೇಕಾದ ಭೂಮಿ ಒಡೆಯನ ಹೆಂಡತಿಗೆ

[ಪಂಚಮ ಪ್ರತಿನಿಧಿಯಿಂದ]

ಜೀತಗಾರನಿಗೆ ದೊರೆಯಬೇಕಾಗಿದ್ದ ದರ್ಖಾಸ್ತ್ ಭೂಮಿ ಒಡೆಯನ ಹೆಂಡತಿ ಪಾಲಿಗೆ ದಕ್ಕಿರುವ ಪ್ರಕರಣ ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕಿನ ಕೊಯಿಲ ಎಂಬ ಗ್ರಾಮದಲ್ಲಿ ಬೆಳಕಿಗೆ ಬಂದಿದೆ.

ಕೊಯಿಲ ಗ್ರಾಮದ ಕೊರಿಯಾರ್ ಎಂಬಲ್ಲಿ ಇರುವ ದಲಿತ ಶ್ರೀಪುತ್ರಮೇರ ಎಂಬಾತ ಭೂಮಾಲೀಕ ಶ್ರೀನಿವಾಸಗೌಡ ಎಂಬುವವನ ಮನೆಯಲ್ಲಿ ಅನೇಕ ವರ್ಷಗಳಿಂದ ಜೀತಕ್ಕಿದ್ದ.

ಕೊರಿಯಾರ್‌ನಲ್ಲಿನ ಸಮತಟ್ಟಾದ ಸರ್ಕಾರಿ ಭೂಮಿ ಮಂಜೂರಾತಿಗಾಗಿ ಪುತ್ರಮೇರ ಅನೇಕರ ಸಲಹೆಯಂತೆ ಸರ್ಕಾರಕ್ಕೆ ಅರ್ಜಿ ಸಲ್ಲಿಸಿದ. ಭೂಮಿ ತನ್ನ ಹೆಸರಿಗೆ ಮಂಜೂರಾಗುವುದೆಂಬ ಭರವಸೆ ಪುತ್ರಮೇರರಲ್ಲಿ ಮೂಡಿತು. ಗೌಡ ಬೆಂಬಲಕೊಟ್ಟ. ಗೌಡನ ಸಲಹೆಯಂತೆ ಆ ಭೂಮಿಗೆ ಬೇಲಿ ಹಾಕಿ ಮನೆಯೊಂದನ್ನು ನಿರ್ಮಿಸಿಕೊಂಡು ಫಲವತ್ತಾದ ಗೇರು ಬೆಳೆ ತೆಗೆದ. ಈ ಬೆಳೆಯು ಗೌಡನ ಕಣ್ಣು ಕುಕ್ಕಿತು. ಜಾಗಬಿಟ್ಟು ಹೊರಡಬೇಕೆಂದು ಬೆದರಿಕೆ ಬಂತು. ಗೌಡನಿಂದ ತನಗೆ ಬಂದ ಬೆದರಿಕೆ ಬಗ್ಗೆ ದಲಿತ ಸಂಘರ್ಷ ಸಮಿತಿ ಜಿಲ್ಲಾ ಶಾಖೆಗೆ ಪುತ್ರಮೇರ ದೂರು ನೀಡಿದ. ಈ ಸಂಬಂಧದಲ್ಲಿ ಸರ್ಕಾರಿ ಅಧಿಕಾರಿಗಳೊಡನೆ ಪರಿಶೀಲಿಸಿದಾಗ ಗೌಡನು 17, ಏಪ್ರಿಲ್ 1979 ರಂದು ಆ ಜಮೀನನ್ನು ತನ್ನ ಹೆಂಡತಿ ಹೆಸರಿಗೆ ಮಂಜೂರು ಮಾಡಿಸಿಕೊಂಡಿರುವುದು ಕಂಡು ಬಂದಿತು.

ಜೀತಗಾರರ ವಿಮುಕ್ತಿ, ಅವರಿಗೆ ನೆಲೆ-ಭೂಮಿ ಕೊಡುವ ಬಗ್ಗೆ ಬರೀ ಘೋಷಣೆಯಲ್ಲೇ ಇರುವ ಸರ್ಕಾರ ಇಂತಹ ಅನ್ಯಾಯಗಳ ಬಗ್ಗೆ ಎಂದು ಗಮನ ಹರಿಸೀತು ?

ಹುಣಸೂರು ತಾಲ್ಲೂಕು ಬನ್ನಿಕುಪ್ಪೆ ಗ್ರಾಮದ ಹರಿಜನರ ಶ್ರೀ ಯಜ್ಞಾರಯ್ಯ ಎಂಬುವವರು ಸಾಮಾನ್ಯವಾಗಿ, ಹರಿದು ಹೊಲೆದ ಬಿಳಿಬಟ್ಟೆ ಹಾಕಿಕೊಂಡು ಆಗುವುದನ್ನೆಲ್ಲ ಸುಮ್ಮನೆ ನೋಡುವುದು, ಯಾವಾಗಲೊ ಒಂದೊಂದು ಮಾತಾಡುವ ರೀತಿಯವರು. ಸುಮಾರು 50 ವರ್ಷಗಳಷ್ಟಾಗಿರುವ ಇವರಿಗೆ ಓದಲು ಬರೆಯಲು ಬಾರದು. ಇವರು ಮಾಡುವುದು ಹೆಬ್ಬೆಟ್ಟು ಒತ್ತುವುದು. ಈ ಹೆಬ್ಬೆಟ್ಟು ಒತ್ತುವುದೇ ಹೊಟ್ಟೆಗೆ ಬಟ್ಟೆಗೆ ನೇರವಾಗಿದ್ದ ಇವರ ಸಂಸಾರವನ್ನು ನರಕವನ್ನಾಗಿಸಿತು. ಇವರ ಕತೆ ಬಗೆಹರಿಸುವವರಿಗೆ ಒಂದು ಸವಾಲಾಗಿ ನಿಲ್ಲುತ್ತದೆ.

ಶ್ರೀ ಯಜ್ಞಾರಯ್ಯ ಬನ್ನಿಕುಪ್ಪೆಯವರಲ್ಲ. ಹೆಚ್ಚು ಕಮ್ಮಿ 40 ವರ್ಷಗಳ ಹಿಂದೆ ಇವರು ಒಂದು ಅನುಕೂಲಸ್ಥರ ಮನೆಗೆ ಮನಾಳ್ತನಕ್ಕೆ ದತ್ತು ಬಂದು ಸೇರಿಕೊಂಡವರು. ಆಗ ಇವರ ಜೀವನ ಯಾವುದೇ ಏರು ಪೇರು ಇಲ್ಲದೆ ನಡೆದುಕೊಂಡಿತ್ತು. ಯಾವಾಗ ಇವರ ಹೆಂಡತಿ ಸೇರಿಕೊಂಡರೊ ಆವಾಗ ಇವರನ್ನು ಮಾವನ ಮನೆಯವರು ಆಸ್ತಿ ಪಾಸ್ತಿ ಏನೂ ಕೊಡದೆ ಮನೆ ಬಿಡುಸಿ ಅತಂತ್ರ ಮಾಡಿದರು. ಇದರೊಟ್ಟಿಗೇ ಮುಂದೆ ಹೇಳುವ ಇವರ ಭೂಮಿ ಸಮಸ್ಯೆಯೂ ಸೇರಿಕೊಂಡು ಇವರ ಬಾಳು ಝರ್ಝರಿತವಾಯ್ತು.

ಇವರ ಹಿರಿಮಗ ಸುಮಾರು 25 ವರ್ಷಗಳ ಸ್ವಾಮಿಗೆ ಮದುವೆ ಆಗಿದೆ. ಈ ಸಂಸಾರದಲ್ಲಿ ಇವರೊಬ್ಬರಿಗೆ ಮಾತ್ರವೆ ರುಜು ಮಾಡಲು ಬರುತ್ತದೆ. ಸ್ವಾಮಿ, ಸ್ವಾಮಿ ಹೆಂಡತಿ ಮತ್ತು ಮೂರು ವರ್ಷದ ಮಗು ಬೇರೆ ಮನೆಯಲ್ಲಿ ಇದ್ದಾರೆ. ಆದರೂ ಅಪ್ಪ-ಮಗನಲ್ಲಿ ಹೊಂದಾಣಿಕೆ ಇದೆ. ಸ್ವಾಮಿಯ ಮಗ ಶಿಶುವಿಹಾರಕ್ಕೆ ಹೋಗುತ್ತಿದೆ. ಯಜ್ಞಾರಯ್ಯನವರ ಇನ್ನೊಬ್ಬ ಮಗ ಸುಮಾರು 20 ವರ್ಷದ ಪಾಪಯ್ಯ-ಕರ್ನಾಟಕ ಮುಖ್ಯಮಂತ್ರಿಗಳ ಊರಾದ ಕಲ್ಲಳ್ಳಿಯಲ್ಲಿ 'ಜೀತವಲ್ಲ ಕೂಲಿಯಾಳು' ಎಂದು ಹೇಳುವ ಕರಾರಿನ ಮೇಲೆ 400 ರೂಪಾಯಿಗೆ ಜೀತಕ್ಕಿದ್ದಾನೆ. ಈ ನಾನೂರು ರೂಪಾಯಿಗಳಲ್ಲಿ 250 ರೂಪಾಯಿಗಳನ್ನು ಜೀತವಿರುವ ಹುಡುಗನ ಮದುವೆಗಾಗಲಿ ಎಂಬ ಉದ್ದೇಶದಿಂದ, ಅಸಲು ಅಸಲಾಗೆ ಉಳಿದು ನೂರು ರೂಪಾಯಿಗೆ 50 ಸೇರು ಬತ್ತದಂತೆ ಬತ್ತದ ಬಡ್ಡಿಗೆ ಕೊಟ್ಟಿರುವರು. ಉಳಿಕೆ ಹಣವನ್ನು ಹೊಟ್ಟೆಗೆ ಮತ್ತು ಇವರು ಮೋಸಕ್ಕೊಳಗಾದ ಭೂಮಿ ವ್ಯವಹಾರದ ಅರ್ಜಿ ಗಿರ್ಜಿ ಹಾಗೂ ಅದಕ್ಕಾಗಿ ಹುಣಸೂರು ಸುತ್ತಲು ಬಳಸಿ ಮುಗಿಸಿದರು.

ಸ್ವಾತಂತ್ರ್ಯ, ಪ್ರಜಾಪ್ರಭುತ್ವ

ಹೀಗೆ ಒಂದು ದಿನ ಯಜ್ಞಾರಯ್ಯನವರೊಡನೆ 'ಬನ್ನಿ ನಿಮ್ಮ ಮನೆಗೆ ಹೋಗುವ, ನಿಮ್ಮೊಡನೆ ಒಂದಿಷ್ಟು ಮಾತಾಡಬೇಕಿತ್ತು' ಎಂದೆ. ಅವರು ನನ್ನನ್ನು ಒಂದು ಮನೆಗೆ ಕರೆತಂದು ಕೂರಿಸಿದರು. ಕಣ್ಣಾಡಿಸಿದರೆ ಈ ಮನೆ ಕಡು ಬಡತನದ್ದಲ್ಲ ಅನ್ನಿಸುವಂತಿತ್ತು. ಮಾತಾಡ್ತ ಮಾತಾಡ್ತ ನಾವು ಕುಂತಿದ್ದ ಮನೆ ಅವರದಲ್ಲ ಎಂದು ತಿಳಿದು ಬಂತು. ನಾನು ಚಡಪಡಿಸಿ 'ಬನ್ನಿ ಸ್ವಾಮಿ, ನಿಮ್ಮ ಮನೆಗೆ ಹೋಗುವ' ಅಂದೆ. ಅವರು ತುಂಬಾ ಸಂಕೋಚಗೊಂಡರು. ಅಲ್ಲಿ ಬಹಳ ಗಲೀಜು ಇಲ್ಲೆ ಮಾತಾಡಿ ಎಂದು ವಿನಂತಿಸಿದರು. ನಾನು ಒಪ್ಪದೆ ಅವರನ್ನು ಎಬ್ಬಿಸಿಕೊಂಡು ಅವರ ಮನೆಗೆ ಬಂದೆವು. ಅವರ ಮನೆ ನೋಡಿದಾಗ ಅವರ ಸಂಕೋಚವೂ ಅರ್ಥಪೂರ್ಣವಾಗಿದೆ ಅನ್ನಿಸಿತು.

ಆ ಮನೆ ಹೌಸಿಂಗ್ ಬೋರ್ಡ್ ಮಾದರಿಯ ವಿಶಾಲವಾದ ಮನೆಯೇ, ನಿಜ. ಮನೆ ತಲೆಯೂ ಮಂಗಳೂರು ಹಂಚನ್ನು ಹೊದ್ದಿದೆ. ಗೋಡೆಗಳಿಗೆ ಗಾರೆಹಚ್ಚು ಹಾಕದೆ ಗೋಡೆಯ ಮ... ಕರಗುತ್ತಿರುವಂತೆ ಕಾಣುತ್ತಿತ್ತು. ಗೋಡೆ... ಅಕ್ಕಪಕ್ಕದಲ್ಲಿದ್ದ ಎರಡು ಕಿಟಕಿಗಳಿಗೂ ತೆಂ...

ದೇವನೂರ ಮಹಾದೇವ

ಬೂತಾಳೆಪಟ್ಟೆ ಮತ್ತು ಹಳೆ ಗೋಣೆಚೀಲಗಳಿ... ಮುಚ್ಚಲ್ಪಟ್ಟಿತ್ತು. ಬಾಗಿಲು ಒಂದು ತಡಿಕೆ...

ಆ ಮನೆ ಇದ್ದ ರೀತಿ ಹೀಗೆ :

ಗುಲಬರ್ಗಾ ಜಿಲ್ಲೆ ದಲಿತರು:

[ಪಂಚಮ ಪ್ರತಿನಿಧಿಯಿಂದ]

ರಾಜ್ಯದ ಗುಲಬರ್ಗಾ ಜಿಲ್ಲೆ ಹಿಂದುಳಿದ ಭಾಗವೆಂದು ಗುರುತಿಸಲ್ಪಡುವ ಹೈದರಾಬಾದ್ ಕರ್ನಾಟಕದ ಮುಖ್ಯ ಜಿಲ್ಲೆ. ಈ ಜಿಲ್ಲೆಯ ಹತ್ತು ತಾಲ್ಲೂಕುಗಳಲ್ಲಿ ದಲಿತರ ಸಂಖ್ಯೆ ಕಡಿಮೆಯೇನಿಲ್ಲ. ಜಿಲ್ಲಾ ಕೇಂದ್ರದಲ್ಲಿ ಹಾಗೂ ಕೆಲವು ತಾಲ್ಲೂಕುಗಳಲ್ಲಿ ಅವರು ತುಸು ಸಂಘಟಿತರೂ, ಆಗಿದ್ದಾರೆ. ನೆರೆಯ ಮಹಾರಾಷ್ಟ್ರದ ದಲಿತ್ ಪ್ಯಾಂಥರ್ಸ್ ಚಳವಳಿಯ ಪ್ರಭಾವವೂ ಸಾಕಷ್ಟಾಗಿದೆ. ಜಿಲ್ಲೆಯ ದಲಿತರಲ್ಲಿ ಗಣನೀಯ ಸಂಖ್ಯೆಯ ದಲಿತರು ಮರಾಠಿ ಭಾಷೆಯ ಜ್ಞಾನವುಳ್ಳವರೂ ಆಗಿದ್ದಾರೆ.


ಗುಲಬರ್ಗಾ ಭಾಗದ ದಲಿತರ ವಿಷಯದಲ್ಲಿ ಎದ್ದು ಕಾಣುವಂಥ ಒಂದೆರಡು ವಿಚಾರಗಳೆಂದರೆ ಇಲ್ಲಿನ ದಲಿತ ಬಂಧುಗಳು ಹೆಚ್ಚಿನ ಮಟ್ಟಿಗೆ ಸ್ವಾಭಿಮಾನಿಗಳು; ತಕ್ಕ ಮಟ್ಟಿಗೆ ಒಕ್ಕಟ್ಟು ಇ... ವರು; ಅನ್ಯಾಯ ಅಸಮಾನತೆಯ ಬಗ್ಗೆ ಪ್ರತಿಭ... ನೆಯನ್ನು ಸೂಚಿಸಬೇಕೆನ್ನು ಮನೋಭಾವದವ... ಕರ್ನಾಟಕದ ಯಾವುದೇ ಭಾಗದಲ್ಲಿ ಕಂ... ಬರುವುದಕ್ಕಿಂಲೂ ಹೆಚ್ಚು ಡಾ. ಅಂಬೇಡ್ಕ... ಬಗೆಗಿನ ನಿಷ್ಠೆ ಇಲ್ಲಿ ಕಂಡು ಬರುತ್ತದೆ. ಒಂ... ಅಂದಾಜಿನ ಪ್ರಕಾರ ಗುಲಬರ್ಗಾ ಜಿಲ್ಲೆಯೊಂ... ರಲ್ಲೇ ಸುಮಾರು ಮುನ್ನರು ಅಂಬೇಡ್ಕ... ಅಥವಾ ಮಾತೋಶ್ರಿ ರಮಾಬಾಯಿ ಅಂಬೇಡ್ಕ... ಸಂಘಗಳಿವೆ. ಹೈಸ್ಕೂಲ್ ಕಾಲೇಜುಗಳಲ್ಲಿ ದಲಿ... ವಿದ್ಯಾರ್ಥಿಗಳ ಸಂಖ್ಯೆಯೂ ಹೆಚ್ಚಿಗಿದೆ.

ಜಿಲ್ಲೆಯ ದಲಿತ ನಾಯಕರುಗಳ ವಿಷಯ ಕೂ... ವಿಚಿತ್ರವಾಗಿದೆ. ಎಲ್ಲಾ ಹಿರಿಯ ನಾಯಕ... ಬೇರೆ ಬೇರೆ ರಾಜಕೀಯ ಪಕ್ಷಗಳಲ್ಲಿ ಹರಿ... ಹಂಚಿ ಹೋಗಿದ್ದಾರೆ. ಭ್ರಷ್ಟಾಚಾರದ ಕೆ... ನಲ್ಲಿ ತಮ್ಮನ್ನೇ ಸಿಕ್ಕಿಸಿಕೊಂಡು ಮುಗ್ಧ ದ...

...ಮತ್ತು ಶ್ರೀ ಯಜ್ಞಾರಯ್ಯ

...ದ್ದು ಅದಕ್ಕೆಂದು ತಂತಿಯಲ್ಲಿ ಅನಗತ್ಯವಾಗಿ ...ಹಾಕಲಾಗಿತ್ತು. ಬೀಗ ತೆಗೆದಾದ ಮೇಲೆ ...ಬಂದೆವು.

...ಮನೆಯಲ್ಲಿ ಕಂಡುಬಂದಂಥ ವಸ್ತುಗಳು ಇಷ್ಟು ...ತ್ರವೆ: 1) ಮೂಲೇಲಿ ಒಂದಿಷ್ಟು ಸೌದೆ ...ಮೇಲಿಂದ ಇಳಿಬಿಟ್ಟಿರುವ ಎರಡು ನೆಲು-...ಖಾಲಿ ಇನ್ನೊಂದರಲ್ಲಿ ಮೂರು ಮಡಿಕೆ,



ಆ ಮಡಿಕೆಗಳೊಳಗೆ ಏನಿತ್ತೊ ತಿಳೀದು. 3) ಒಂದು ಸಿಲ್ವರ್ ತಟ್ಟೆ 4) ಒಂದು ತಪ್ಪಲೆ 5) ಒಂದು ಮಂದಲಿಗೆ 6) ಒಂದು ಖಾರ ಅರೆಯುವ ಕಲ್ಲು–ಗುಂಡು 7) ಒಂದು ಒಲೆ ಎರಡು ಮಡಿಕೆ ಒಂದು ಸೌಟು ಒಂದು ದೊಣ್ಣೆ 8) ಒಂದು ಗೋಣಿ ಚೀಲ ಒಂದು ಕೈಚೀಲ 9) ಎರಡು ಶರ್ಟು ಎರಡು ನಿಕ್ಕರು 10) ಒಂದು ಹಿ ಡಿ ಗ ಲು. ಯಾವಾಗಲಿಂದ ನಿಮಗೆ ಇಂಥ ಬಡಸ್ತನ ಬಂತು ಎಂದು ನಾನು ಕೇಳಿದಾಗ ಅವರು ದುಃಖ ತುಂಬಿಕೊಂಡರು. ಮೂವತ್ತು ವರ್ಷಗಳ ಹಿಂದೆ ಯಜ್ಞಾರಯ್ಯನವರು ಎರಡು ಎಕರೆ ಕಾಡು ತರದು ಉತ್ತುಬಿತ್ತು ಒಂದು ಹದಕ್ಕೆ ತಂದು ಕೊಂಡು ಯಾವ ತಾಪತ್ರಯವೂ ಇಲ್ಲದೆ ಜೀವನ ಸಾಗಿಸಿಕೊಂಡು ಬರುತ್ತಿದ್ದರು. ಆ ಭೂಮಿ ಫಲವತ್ತಾದ ನೀರಾವರಿ ಭೂಮಿಯಾಗಿದ್ದು ಇವರನ್ನು ಕಾಪಾಡಿಕೊಂಡು ಬರುತ್ತಿತ್ತು. ಈ ರೀತಿಯಾಗಿ ಹದಿನೈದು ವರ್ಷಗಳಾಗಲು ಅಲ್ಲಿಯವರೇ ಅದೇ ಕೋಮಿನವರೇ ಸಿದ್ದಯ್ಯನ ಮಗ ಸಿದ್ದಯ ಎಂಬಾತ ಯಜ್ಞಾರಯ್ಯ ಮಾಡುವ ಭೂಮಿ ತನಗೇ ಸೇರಬೇಕೆಂದು ಹುಣಸೂರು ಕೋರ್ಟಿನಲ್ಲಿ ಲಾಯರು ಕಟ್ಟಿ ವ್ಯಾಜ್ಯ ಹೂಡಿದಾಗ ಯಜ್ಞಾರಯ್ಯನವರ ಪರಿಸ್ಥಿತಿ ಬಿಗುಡಾಯಿಸಿತು. ಯಜ್ಞಾರಯ್ಯ ಹಂಗಾಮಿ ಸಾಗುವಳಿ ಪಡೆದು ಕಂದಾಯ ಕಟ್ಟುತ್ತ ಉಳುಮೆ ಮಾಡುತ್ತಿದ್ದ ಭೂಮಿಯನ್ನೆ ಸರ್ಕಾರವು ಸಿದ್ದಯ್ಯನ ಮಗ ಸಿದ್ದಯ್ಯನಿಗೂ ಸ್ಯಾಂಕ್ಷನ್ ಮಾಡಿತ್ತೆ ಎಂಬುದನ್ನು ಸ್ಪಷ್ಟಪಡಿಸಿಕೊಳ್ಳಬೇಕು. ಇರಲಿ, ಪರಿಸ್ಥಿತಿಯಲ್ಲಿ ಯಜ್ಞಾರಯ್ಯನವರಿಗೆ ಕೋರ್ಟು ಹತ್ತಲು ಲಾಯರು ಕಟ್ಟಲು ಹಣಕಾಸು ಇಲ್ಲದೆ ಏನೂ ತೋಚದಂತಾಯ್ತು. ಆಗ ದಿಕ್ಕೆಟ್ಟ ಯಜ್ಞಾರಯ್ಯ ಹಣಕ್ಕಾಗಿ ದೊಡ್ಡೇಗೌಡನ ಮಗ ಡಿ. ಚನ್ನೇಗೌಡ ಎಂಬ ಶ್ರೀಮಂತನಿಗೆ ಶರಣಾದರು. ಆ ಇಬ್ಬರಲ್ಲೂ ಒಂದು ಕರಾರು ಆಯ್ತು ಏನೆಂದರೆ, ಯಜ್ಞಾರಯ್ಯ ಕೇಸು ಮುಗಿಯುವವರೆಗೂ ಚನ್ನೇಗೌಡನ ಮನೇಲಿ ಜೀತಕ್ಕಿರುವುದೆಂತಲೂ ಮತ್ತು ಯಜ್ಞಾರಯ್ಯನ ಎರಡು ಎಕರೆ ಭೂಮಿಯನ್ನು ಕೇಸು ಮುಗಿಯುವವರೆಗು ಡಿ. ಚನ್ನೆಗೌಡ ಅನುಭವಿಸುವಂತೂ, ಇದಕ್ಕೆ ಬದಲಾಗಿ ಚನ್ನೇಗೌಡ ಲಾಯರ್ ಕಟ್ಟಿ ಆ ಕೇಸು ಸಂಬಂಧಿಸಿದ ಕರ್ಚುವೆಚ್ಚಗಳನ್ನೆಲ್ಲ ನೋಡಿಕೊಳ್ಳಬೇಕೆಂದೂ ಕೇಸು ಮುಗಿದ ಮೇಲೆ ಯಜ್ಞಾರಯ್ಯ ಜೀತದಿಂದ ಬಿಡುಗಡೆಯಾಗಿ ತನ್ನ ಭೂಮಿಯನ್ನು

[6ನೇ ಪುಟನೋಡಿ]

...ರವಿದ್ದರೂ ದಿಕ್ಕುತಪ್ಪಿದ್ದಾರೆ

ವಿಶೇಷ ವರದಿ

...ಬಲಿ ತೆಗೆದುಕೊಳ್ಳುವಂಥ ಸ್ವಭಾವದ ...ಕರು. ಅಪರೂಪಕ್ಕೆಂಬಂತೆ ಒಬ್ಬಿಬ್ಬರು ...ಾಣಿಕ ದಲಿತ ನಾಯಕರು ದೊರಕಬ...

...ರ್ಗಾ ನಗರದಲ್ಲೇ ಸುಮಾರು ಮೂರು ...ಕ್ಕೂ ಹೆಚ್ಚು ದಲಿತ ವಿದ್ಯಾರ್ಥಿಗಳು ...ಬೇರೆ ಹಾಸ್ಟೆಲ್‌ಗಳಲ್ಲಿ ಹಂಚಿ ಹೋಗಿ ... ದಲಿತ ಹಿರಿಯರೇ ನಡೆಸುತ್ತಿರುವ ಈ ...ಲ್‌ಗಳಲ್ಲಿ ದಲಿತ ವಿದ್ಯಾರ್ಥಿಗಳು ಶೋಷಿತ...ದ್ದಾರೆ. ಧಾರವಾಡದ ದಲಿತ ಹಾಸ್ಟೆಲ್ ...ನಡೆಯುತ್ತಿದ್ದಷ್ಟೇ ದೌರ್ಜನ್ಯ ವಂಚನೆ ...ಬಹುತೇಕ ಎಲ್ಲಾ ಹಾಸ್ಟೆಲ್‌ಗಳಲ್ಲಿ ನಡೆ...ದೆ.

...ಅಂಬೇಡ್ಕರರ ಕನಸಿನ ಪಕ್ಷವಾಗಿದ್ದ ರಿಪಬ್ಲಿ...ಧ್ಯಕ್ಷರು ಈ ಭಾಗದ ಪ್ರಮುಖ ದಲಿತ ನಾಯಕರು. ಸಾಕಷ್ಟು ಮಟ್ಟಿಗೆ ದಲಿತರು ರಿಪಬ್ಲಿಕನ್ ಪಕ್ಷವನ್ನು ಮೆಚ್ಚುತ್ತಾರಾದರೂ ಇಂದಿರಾ ಕಾಂಗ್ರೆಸ್ ಕಡೆಗಿನ ಒಲವು ಎಲ್ಲೆಡೆಗೆ ಇರುವಷ್ಟೇ ಇದೆ. ಸಾಮಾನ್ಯವಾಗಿ ಈ ಭಾಗದ ಹರಿಜನ ಮುಂದಾಳುಗಳೆಲ್ಲ ಈಗ ಕಾಂಗ್ರೆಸ್-ಐ ಬಿಟ್ಟಿರುವುದರಿಂದ ಮುಂದೆ ದಲಿತರು ಯಾವ ದಾರಿಯನ್ನು ಹಿಡಿಯುತ್ತಾರೆಂದು ಕಾದು ನೋಡಬೇಕಾಗಿದೆ.

ಗುಲಬರ್ಗಾ ಜಿಲ್ಲೆಯಲ್ಲಿ, ಸುತ್ತಮುತ್ತ ದಲಿತರು ಸಾಕಷ್ಟು ಸಂಘಟಿತರಾಗಿದ್ದಾಗ್ಯೂ, ವಿದ್ಯಾವಂತರೂ ಸ್ವಾಭಿಮಾನಿಗಳೂ ಆಗಿದ್ದರೂ ಅವರು ನ್ಯಾಯಕ್ಕಾಗಿ, ಸಮಾನತೆಗಾಗಿ ಸುಸಂಘಟಿತ ಹಾಗೂ ಸುಸಂಬದ್ಧ ಹೋರಾಟಗಳ ಬಗ್ಗೆ ಚಿಂತಿಸುವುದಿಲ್ಲ ಎಂಬುದು ಎದ್ದು ಕಾಣುತ್ತದೆ. ಈ ವಿಷಯದ ಸಂಬಂಧದಲ್ಲಿ ಮುಖ್ಯವಾಗಿ ಹೀಗೆ ಕಾರಣಗಳನ್ನು ಗುರುತಿಸಬಹುದಾಗಿದೆ. 1) ಅಂಬೇಡ್ಕರರ ಮೇಲಿನ ಅತಿಯಾದ ಭಕ್ತಿಯ ದೆಸೆಯಿಂದ ಅವರ ವಿಚಾರಗಳಲ್ಲಿನ ಹೋರಾಟದ ಮನೋಭಾವದ ಸಂಬಂಧದಲ್ಲಿ ಕುರುಡು ಮನೋಭಾವ ತಾಳಿರುವುದು. 2) ಸುಸಂಘಟನೆಯ ಅತ್ಯವಶ್ಯಕತೆಯ ಬಗೆಗಿನ ಅಜ್ಞಾನ. 3) ಯಥಾಸ್ಥಿತಿವಾದಿ ಧೋರಣೆಯ ಹಲವಾರು ದಲಿತ ನಾಯಕರು. 4) ರಾಷ್ಟ್ರದಲ್ಲಿ ಅಥವಾ ಯಾವುದೇ ರಾಜ್ಯದಲ್ಲಿನ ಸುಸಂಘಟಿತ ಹೋರಾಟಗಳ ಬಗೆಗಿನ ಆಳವಾದ ಅಭ್ಯಾಸದ ಕೊರತೆ. ಈ ದಿಕ್ಕಿನಲ್ಲಿ ದಲಿತ ಯುವಕರು ಅಂಬೇಡ್ಕರ್‌ರವರ ಹೋರಾಟ-ಪ್ರಗತಿಪರ ವಿಚಾರಗಳ ಬಗ್ಗೆ ವಿಚಾರ ಬೆಳಸಿಕೊಳ್ಳುವುದು ತೀರಾ ಅಗತ್ಯ.

ಈಗ ಇಲ್ಲಿ ಆಗಬೇಕಾಗಿರುವ ಮುಖ್ಯ ಕೆಲಸ ದಲಿತ ಸಮುದಾಯವನ್ನು ನಿಜವಾದ ಅರ್ಥದಲ್ಲಿ ಸುಸಂಘಟಿತರನ್ನಾಗಿಸಿ, ಜಾತಿಮುಕ್ತ ವರ್ಗಮುಕ್ತ ಒಟ್ಟಿನಲ್ಲಿ ಶೋಷಿತ ದಲಿತರನ್ನು ಎಚ್ಚರಗೊಳಿಸಿ ಒಂದಾಗಿಸಿ ಹೋರಾಟಕ್ಕೆ ಅಣಿಗೊಳಿಸುವುದು.

ಸ್ವಾತಂತ್ರ್ಯ, ಪ್ರಜಾಪ್ರಭುತ್ವ ಮತ್ತು ಶ್ರೀ ಯಜ್ಞಾರಯ್ಯ..........

[ಮಧ್ಯದ ಪುಟದಿಂದ]

ಅನುಭವಿಸುವುದೆಂತು ಮಾತಾಗಿತ್ತು. ಮಾತಿನ ಪ್ರಕಾರವಾಗಿ ಯಜ್ಞಾರಯ್ಯ ಜೀತಕ್ಕೆ ಬಿದ್ದರು.

ಮೇಲ್ಕಂಡ ಕೇಸನ್ನು ನಿಭಾಯಿಸಲು ಹುಣಸೂರಿನ ಗೋಪಾಲಕೃಷ್ಣ ಎಂಬ ಲಾಯರನ್ನು ಯಜ್ಞಾರಯ್ಯನವರ ಪರವಾಗಿ ಕಟ್ಟಲಾಯ್ತು. ಕೇಸು ಯಾವವ ಹಂತದಲ್ಲಿ ಇದೆ ಏನು ಎತ್ತ ಎಂಬ ಯಾವುದೂ ಯಜ್ಞಾರಯ್ಯನವರಿಗೆ ಗೊತ್ತಾಗುತ್ತಿರಲಿಲ್ಲ. ಸುಮಾರು ಐದು ವರ್ಷಗಳ ಹಿಂದೆ ಒಂದು ದಿನ ಚನ್ನೇಗೌಡನ ಎದುರಲ್ಲಿ ಲಾಯರು ಯಜ್ಞಾರಯ್ಯನಿಗೆ 'ನಿನ್ನ ಕೇಸು ಹುಣಸೂರು ಕೋರ್ಟಿಂದ ಮೈಸೂರು ಕೋರ್ಟಿಗೆ ಹೋಯ್ತು. ಅಲ್ಲಿಗೆಲ್ಲ ನೀನು ತಿರುಗಾಡಕ್ಕೆ ಆಗುತ್ತ? ಚನ್ನೇಗೌಡರ ಹೆಸರಿಗೆ ಕ್ರಯ ಮಾಡು. ಅವರು ಮೈಸೂರು ತಿರುಗಾಡಿ ಕೇಸು ಗೆದ್ದಮೇಲೆ ನಿನ್ನ ಹೆಸರಿಗೆ ಕ್ರಯಮಾಡುವರು' ಎಂದರು. ಆಗ ಯಜ್ಞಾರಯ್ಯ ಹಿಂದು ಮುಂದು ನೋಡಿದರು. ಲಾಯರು ಮತ್ತು ಗೌಡ ಇಬ್ಬರೂನು 'ಕ್ರಯಮಾಡದಿದ್ದರೆ ಭೂಮಿ ಕೈ ಬಿಟ್ಟು ಹೋಗುತ್ತೆ' ಎಂದು ಹೆದರಿಸಿದಾಗ ಯಜ್ಞಾರಯ್ಯ ಕ್ರಯಕ್ಕೆ ಒಪ್ಪಬೇಕಾಯ್ತು. ಆರು ಸಾವಿರಕ್ಕೆ ಕ್ರಯವಾಯ್ತು; ಭೂಮಿ ಗೌಡನದಾಯ್ತು. ಕ್ರಯದ ಟೈಮಲ್ಲಿ ಆರು ಸಾವಿರ ರೂಪಾಯಿಗೆ ಕ್ರಯಬೇಡಿ ಎಂದು ಯಜ್ಞಾರಯ್ಯ ಹಠ ಮಾಡಿದಾಗ ಅದಕ್ಕೆ ಲಾಯರು, ಅದಕ್ಕೆ ಕಮ್ಮಿಯಾದರೆ ಕ್ರಯನಿಲ್ಲುವುದಿಲ್ಲ ಎಂದೂ ಕ್ರಯವಲ್ಲ ಎಂದು ಎದುರು ಪತ್ರವನ್ನು ಗೌಡನಿಂದ ಬರೆಸಿಟ್ಟುಕೊಳ್ಳುವುದಾಗೂ ನಂಬಿಸಿ ಸಮಾಧಾನಮಾಡಿದರಂತೆ. ಸಮಾಧಾನದಿಂದ ಯಜ್ಞಾರಯ್ಯ ಹೆಬ್ಬೆಟ್ಟು ಒತ್ತಿದರು.

ಕ್ರಯ ಮಾಡಿದ ಭೂಮಿ ಇದುವರೆಗೂ ಯಜ್ಞಾರಯ್ಯನವರ ಕೈಗೆ ಬಂದಿಲ್ಲ. ಲಾಯರು ಆಡಿದ್ದ ಮಾತಿನಂತೆ 'ಎದುರು ಪತ್ರ' ಕೇಳಿದರೆ ಅವನು ತಲೆತಪ್ಪಿಸಿ ಕೊಳ್ಳುವನಂತೆ. ಗೌಡನಲ್ಲಿ ಭೂಮಿ ಕೇಳಿದರೆ ಪತ್ರದಲ್ಲಿ ಬರೆದಿರುವಷ್ಟು ಹಣ ತಂದು ಮಡುಗು ಅನ್ನುವನಂತೆ. ಆಗಲಿಂದೀಗ ಯಜ್ಞಾರಯ್ಯ ಭೂಮಿಗಿಳಿದು ಹೋಗಿರುವರು.

ಈ ಅನ್ಯಾಯ ಸರಿಪಡಿಸುವಂತೆ ತಹಸೀಲ್ದಾರು, ಎಸಿ, ಡೀಸಿ, ಮಂತ್ರಿ ಮಾನ್ಯರೆಲ್ಲರಿಗೂ ಯಜ್ಞಾರಯ್ಯ ಅರ್ಜಿ ಬರೆದು ಕೊಂಡರು. ಅಕ್ಕಲಾಡ್ಜ ಮೆಟ್ಟಿಗಳು ತಪ್ಪದೆ ಬಂದಿವೆ. ಎಲ್ಲವನ್ನೂ ಕಣ್ಣಿನಂತೆ ಜೋಪಾನವಾಗಿ ಇಟ್ಟಿರುವರು. ಇನ್ನೂರು ರೂಪಾಯಿ ಖರ್ಚುಮಾಡಿ ಬೆಂಗಳೂರು ಹತ್ತಿ ಮಿನಿಸ್ಟರನ್ನೂ ಕಂಡು 'ಆಗಲಿ ನೋಡುವ' ಭರವಸೆ ಹೊತ್ತು ಊರಿಗೆ ಬಂದರು. ಈಗಲೂ ಇನ್ನೊಂದು ಗಳಿಗೆಗೂ ಇವರು, ಸಂಬಂಧ ಇರಲಿ ಇಲ್ಲದಿರಲಿ ಕಂಡಕಂಡ ಅಧಿಕಾರಿಗಳಿಗೆ ತಮ್ಮ ಗೋಳನ್ನು ಹೇಳಿಕೊಳ್ಳುತ್ತ ಬರುತ್ತಿರುವರು. ಈಗಲೂ ದುಡ್ಡು ಸಿಕ್ಕರೆ ಒಂದು ಹೊತ್ತು ಹಸಿದುಕೊಂಡಾದರೂ ಅರ್ಜಿಯನ್ನು ಟೈಪು ಮಾಡಿಸಿ ಯಾರಿಗಾರು ಅಧಿಕಾರಿಗಳಿಗೆ ರಿಜಿಸ್ಟರ್ ಪೋಸ್ಟ್ ಕಳಿಸುವರು. ಇಂಥದಕ್ಕಾಗಿಯೇ ಇವರಿಂದ ಹಾಗೂ ಹೀಗೂ ನಾನೂರು ರೂಪಾಯಿಗಳಷ್ಟು ಕೈ ಬಿಟ್ಟಿದೆ. ದೊಡ್ಡ ತಮಾಷೆ ಎಂದರೆ, ಯಜ್ಞಾರಯ್ಯನವರ ಭೂಮಿ ಕೇಸು ಹುಣಸೂರಿನಲ್ಲೇ ಯಜ್ಞಾರಯ್ಯನವರ ಪರವಾಗಿ ತೀರ್ಮಾನವಾಗಿತ್ತಂತೆ; ಅದು ಮೈಸೂರು ಕೋರ್ಟನ್ನೇನು ಹತ್ತಲಿಲ್ಲವಂತೆ; ಇದು ಬಹಳ ದಿನಗಳಾದ ಮೇಲೆ ಯಜ್ಞಾರಯ್ಯನವರಿಗೆ ಅರುವಾಯ್ತು. ಅವರು ಅಂದರು: "ಮೋಸದಿಂದ ನನ್ನ ಜಮೀನ ಅಪಹರಿಸಿಬಿಟ್ಟು ನಾನು ನನ್ನ ಇರೋ ಐದು ಮಕ್ಕಳ ಅನ್ನ ಕಿತ್ತುಕೊಂಡು ಬಿಟ್ರು..."

ನಾನು ಕೇಳಿದೆ: "ಈಗ ನಿಮ್ಮ ಮನೆ ಮಂದಿ ಎಲ್ರೂ, ಕೂಲಿ ಮಾಡ್ತ ಇದ್ದೀರಿ...ಅದು ನಿಮ್ಮ ಹೊಟ್ಟೆ ಬಟ್ಟೆಗೆ ಸಾಕಾಗುತ್ತಾ...?"

"ಹೆಂಗ್ತಾನೆ ಸಾಕಾದ್ದು ಸ್ವಾಮಿ"

"ವರ್ಷ ಪೂರ್ತ ಕೂಲಿ ಸಿಕ್ಕರೆ ನಿಮ್ಮ ಸಂಸಾರ ನಿಭಾಯಿಸ್ಕೊಂಡು ಹೋಗಕ್ಕಾಗುತ್ತ?"

"ಒಂದೇ ಸಮ ಕೂಲಿ ಸಿಕ್ಕ ಬೇಕಲ್ವ ಬುದ್ಧಿ..."

"ಸಿಕ್ಕರೆ..."

"ಸಿಕ್ಕರೆ ಹಾಗೂ ಹೀಗೂ ನೂಕಬಹುದು ಅನ್ನಿ... ಸಿಕ್ಕಬೇಕಲ್ವ..."

"ಕೂಲಿ ಸಿಕ್ಕದಿದ್ದಾಗ ಏನ್ಮಾಡ್ತೀರಿ...?"

"ಆಗ ಆ ಜಗದೀಶನೊಬ್ಬನಿಗೇ ಗೊತ್ತು..."

"ಹೊಟ್ಟೆಗೆ ಏನ್ಮಾಡ್ತೀರಿ..."

"ಕೂಲಿ ಸಿಕ್ಕಗಂಟ ಏನ್ಮಾಡಕ್ಕಾದ್ದು...?"

"ಅದ್ನೆ ನಾನು ಕೇಳ್ತ, ಇರೋದು..."

"ಮಾತಾಡಂಗಿಲ್ಲ. ಕೂಲಿಸಿಕ್ಕರೆ ಅನ್ನ. ಏನ್ಮಾಡಕು ಅಸಾಧ್ಯ."

ಮುಂದಕ್ಕೆ ನಾನು ಮಾತಾಡಲಿಲ್ಲ. ಮಾತು ತಿರುಗಿಸಿದೆ. ಇವರು ಈಗ ಕಟ್ಟಿಸಿರೊ ಮನೆಗಾಗಿ 4,000 ರೂಪಾಯಿ ಸರ್ಕಾರಿ ಸಾಲ ತೆಗೆದುಕೊಂಡಿರುವರು. ಯಾವ ಬಡ್ಡೀದೋ ಯಾವ ರೀತಿ ತೀರಿಸಬೇಕೊ ಅವರಿಗೆ ಗೊತ್ತಿಲ್ಲ. ಯಾವ ರೀತಿ ತೀರಿಸುವರೊ ಎಂಬುದು ನನಗೂ ಗೊತ್ತಿಲ್ಲ. ಈ ಮನೆ ಸಾಲದ ಬಾಬ್ತು ಕೊನೆ ಕಂತು 600 ರೂಪಾಯಿಗಳನ್ನು 'ಯಾಕೆ ಸಾಲ ಏರಿಸ್ಕಳ್ಳದು ಬಡ್ಡಿಗಾರು ವಜಾವಾಗ್ಲಿ' ಎಂಬ ದೃಷ್ಟಿಯಿಂದ ಕೊನೆ ಕಂತನ್ನು ಇವರು ತಕ್ಕಂಡಿಲ್ಲ. ಈ ಮನೆಯ ಹಿಂಭಾಗ ಹೆಂಚಾಕಿಸದೆ ಬಿದ್ದಿದೆ. ಈ ಮನೆಯ ಸೈಟನ್ನು ಇವರು ಗದ್ದೆ ಮಾಡಿಕೊಂಡು ಅನುಕೂಲವಾಗಿದ್ದಾಗ 250 ರೂಪಾಯಿಗೆ ಕೊಂಡಿದ್ದರು. ತಲಾ 500 ರೂಪಾಯಿಗಳಂತೆ ಒಂದು ಸಾವಿರ ರೂಪಾಯಿ ಇವರು ಇವರ ಮಗನಿಗೆ ಜೀತವಿಮೋಚನಾ ಸಾಲ ಸಿಕ್ಕಿದೆ. ಮೇಲ್ಕಂಡ ವಿಮೋಚನಾ ಹಣವನ್ನು ಇವರು ಭೂಮಿ ಸಂಬಂಧಿಸಿದ ಅರ್ಜಿ ಸುತ್ತಾಟ ಹೊಟ್ಟೆಬಟ್ಟೆಗೆ ಖರ್ಚು ಮಾಡಿಕೊಂಡರು. ನಾನು ಸುಸ್ತಾಗಿ ಕೊನೆಯದಾಗಿ ಪ್ರಶ್ನಿಸಿದೆ—"ಏನಾದರೆ ನಿಮ್ಮ ಸಂಸಾರ ಎರಡೊತ್ತು ಉಂಡುಕೊಂಡು ಹೋಗಬಹುದು?"

ಅವರು ಉತ್ತರಿಸಿದರು: "ಕೂಲಿಯಿಂದ ನಮ್ಮ ದರಿದ್ರ ಹತವಾಗಲ್ಲ ಸ್ವಾಮಿ......ಭೂಮಿ ಬೇಕು......"

ಮಹಾರಾಷ್ಟ್ರ ವಿಧಾನ ಸಭೆಯಲ್ಲಿ ದಲಿತ ಪ್ಯಾಂಥರ್ಸ್ ಘರ್ಜನೆ

ಮಹಾರಾಷ್ಟ್ರ ವಿಧಾನಸಭಾ ಅಧಿವೇಶನ ನಡೆಯುವಾಗ ಆಗಸ್ಟ್ 9 ರಂದು ದಲಿತ ಪ್ಯಾಂಥರ್ಸ್ ಕಾರ್ಯಕರ್ತನೊಬ್ಬ ಪ್ರೇಕ್ಷಕರ ಗ್ಯಾಲರಿಯಿಂದ ಸದನಕ್ಕೆ ದುಮುಕಿ ಮರಾಠವಾಡ ವಿಶ್ವವಿದ್ಯಾನಿಲಯಕ್ಕೆ ಡಾ॥ ಬಿ. ಆರ್. ಅಂಬೇಡ್ಕರ್ ಅವರ ಹೆಸರನ್ನಿಡಬೇಕೆಂದು ಘೋಷಣೆ ಹಾಕಿ ಒತ್ತಾಯಪಡಿಸಿದ.

ಈ ಸಂಬಂಧದಲ್ಲಿ ಅನೇಕ ಬಾರಿ ಪ್ರೇಕ್ಷಕರ ಗ್ಯಾಲರಿಯಿಂದ ಘೋಷಣೆ ಹಾಕಿದ ಇನ್ನು ನಾಲ್ವರು ಪ್ಯಾಂಥರ್ಸ್ ಕಾರ್ಯಕರ್ತರನ್ನು ಮಾರ್ಷಲ್ ಸಿಬ್ಬಂದಿಯು ಬಂಧಿಸಿ ಬಿಡುಗಡೆ ಮಾಡಿದರು.

ಈಗೇನು ಹರಿಜನರಿಗೇ ಭೂಮಿ; ಎಲ್ಲಾದ್ರೂ ಸಿಗುತ್ತೆ ಹೋಗಿ—ಶಾಸಕ ಚಂದ್ರೇಗೌಡ

ವರದಿ : ಎಂ. ಡಿ. ಗಂಗಯ್ಯ

ಚಿಕ್ಕಮಗಳೂರು ತಾಲ್ಲೂಕು ಚಂಡಗೋಡು ಒಂದು ಕುಗ್ರಾಮ. ಅಲ್ಲಿ ಸುಮಾರು 50 ಹರಿಜನ ಕುಟುಂಬಗಳಿವೆ, ಇವರೆಲ್ಲರು ಭೂಹೀನರಾಗಿದ್ದು, ಕಾಫಿ ತೋಟಗಳಲ್ಲಿ 4 ಅಥವಾ 5 ರೂ ಕನಿಷ್ಟ ಕೂಲಿಯಿಂದ ಅರೆಬರೆ ಬದುಕು ಸಾಗಿಸುತ್ತಿದ್ದಾರೆ.

ಇತ್ತೀಚಿನ ಕೆಲವು ತಿಂಗಳ ಹಿಂದೆ ದರ್ಖಾಸ್ತು ಭೂಮಿ ಕೊಡುವ ಸುದ್ದಿ ಹಬ್ಬಿತ್ತು. ಅಂತಯೇ ತಮ್ಮ ಗ್ರಾಮದ ವ್ಯಾಪ್ತಿಗೆ ಸೇರಿದ ಕೇಸವಿನಹಕ್ಕಲ ಬಳಿಯ ಸರ್ವೆನಂಬರ್ 74 ಮತ್ತು 75 ಕ್ಕೆ ದರ್ಖಾಸ್ತಿಗಾಗಿ ಅರ್ಜಿಸಲ್ಲಿಸಿದರು. ಭೂಮಿ ಸಿಗಬಹುದೆಂಬ ಮಹಾದಾಸೆಯಿಂದ ತಮ್ಮ ದುಡಿತದ ಪ್ರಮಾಣ ಮೀರಿ ಸಾಕಷ್ಟು ಸಾಲ ಮಾಡಿ ಚಿಕ್ಕಮಗಳೂರು ತಾಲ್ಲೂಕು ಕಚೇರಿಗೆ ತಿಂಗಳುಗಟ್ಟಲೆ ತಿರುಗಾಡಿದರು. ಕಂಡ ಕಂಡ ಪುಢಾರಿಗಳಿಗೆ ಕೈಮುಗಿದರು, ಅಧಿಕಾರಿಗಳ ಮುಂದೆ ತಮ್ಮ ನೋವು ಆಸೆ ಆಕಾಂಕ್ಷೆಗಳನ್ನು ತೋಡಿಕೊಂಡರು. 'ನೊಡೋಣ' 'ಆಗ ಬಾ ಈಗ ಬಾ' ಎಂಬ ಭರವಸೆಗಳು ಬಂದವು. ಇಂದೋ ನಾಳೆಯೋ ಭೂಮಿ ಸಿಗುತ್ತೆ ಎಂದು ನಂಬಿ ಕುಳಿತರು.

ಆದರೆ ಇದ್ದಕ್ಕಿದ್ದಂತೆ ಇತ್ತೀಚೆಗೆ ಆ ಭೂಮಿಯಲ್ಲಿ ಚಿಕ್ಕಮಗಳೂರಿನ ಶಾಸಕ ಸಿ.ಎ.ಚಂದ್ರೇಗೌಡರ ಮಗ ಸುರೇಶ್ ಮೋಹನಗೌಡ ಮತ್ತು ಬೈಗೂರು ಪಂಚಾಯಿತಿ ಕಾರ್ಯದರ್ಶಿ ಹನೀಫ್ ಸಾಹೇಬ್ ಮತ್ತಿತರರು ಸರ್ಕಾರದ ಅನುಮತಿ ಇಲ್ಲದೆ ಅಲ್ಲಿದ್ದ ಗಿಡಮರಗಳನ್ನು ಕಡಿದು ಕಾಫಿ ಮತ್ತು ಏಲಕ್ಕಿ ಬೆಳೆಮಾಡಲು ತೊಡಗಿದ್ದಾರೆ. ಹರಿಜನರಿಗೆ ಈ ಭೂಮಿ ದೊರೆಯುವ ಸಾಧ್ಯತೆಗಳನ್ನು ತಮ್ಮ ರಾಜಕೀಯ ಪ್ರಾಬಲ್ಯದಿಂದ ಮುರಿಯುತ್ತಿದ್ದಾರೆ.

ಈ ಸಂಬಂಧದಲ್ಲಿ ಹರಿಜನರು ಶಾಸಕ ಚಂದ್ರೇಗೌಡರ ಬಳಿ ಹೋಗಿ ತಮಗೆ ಮಂಜೂರಾಗಲಿದ್ದ ಭೂಮಿಯನ್ನು ಆಕ್ರಮಿಸಿಕೊಳ್ಳುತ್ತಿರುವ ಬಗ್ಗೆ ತಿಳಿಸಿ ತಮಗೇ ಆ ಭೂಮಿ ಮಂಜೂರು ಮಾಡಿಸಿಕೊಡುವಂತೆ ಬೇಡಿಕೊಂಡರು. ಅದಕ್ಕೆ "ಈಗೆಲ್ಲ ಬರೀ ಹರಿಜನರಿಗೇ ಭೂಮಿ ಕೊಡ್ತಿದ್ದಾರೆ; ನಿಮ್ಗೇನು ಎಲ್ಲಾದ್ರು ಸಿಗುತ್ತೆ ಹೋಗಿ" ಎಂದು ಅವರು ಗದರಿಸಿ ಕಳುಹಿಸಿದ್ದಾರೆ.

ಈ ಎಲ್ಲಾ ಅನ್ಯಾಯಗಳ ಬಗ್ಗೆ ದಲಿತ ಸಂಘರ್ಷ ಸಮಿತಿಯು ತಹಸಿಲ್ದಾರ್, ಅಸಿಸ್ಟೆಂಟ್ ಕಮೀಷನರ್ ಮತ್ತು ಜಿಲ್ಲಾಧಿಕಾರಿಗಳ ಗಮನಕ್ಕೆ ತಂದಿತು. ಹರಿಜನರಿಗೇ ಆ ಭೂಮಿ ದೊರೆಯುವ 'ಭರವಸೆ' ಮಾತ್ರ ಈಗ ಬಂದಿದೆ.

ಕೋಲಾರದಲ್ಲಿ ದ.ಸಂ.ಸ. ಪ್ರತಿಭಟನಾ ಪ್ರದರ್ಶನ

ಕೋಲಾರ ತಾಲ್ಲೂಕು ಕಲ್ಲುಂಡೂರು, ಜಂಗಾಲಹಳ್ಳಿ ಮತ್ತು ನಂದಂಬಳ್ಳಿ ದಲಿತರಿಗೆ ಗೋಮಾಳ ಹಂಚಿಕೆ ಮತ್ತು ಕಾಲೇಜು ವಿದ್ಯಾರ್ಥಿಗಳ ವಿದ್ಯಾರ್ಥಿನಿಲಯ ಕಟ್ಟಡ ನಿರ್ಮಾಣದಲ್ಲಿ ಆಗುತ್ತಿರುವ ವಿಳಂಬ ಮತ್ತಿತರ ತಮ್ಮ ಹಿಂದಿನ ಬೇಡಿಕೆಗಳನ್ನು ಕೂಡಲೇ ಈಡೇರಿಸಬೇಕೆಂದು ಒತ್ತಾಯಿಸಲು ದಲಿತ ಸಂಘರ್ಷ ಸಮಿತಿ ಕೋಲಾರ ಜಿಲ್ಲಾ ಶಾಖೆಯು ಕೋಲಾರ ಕಾಲೇಜಿನ ಮಾನವತಾ ವೇದಿಕೆಯ ಜೊತೆಗೂಡಿ ಜುಲೈ 26 ರಂದು ಅಧಿಕಾರಿಗಳ ನಿರ್ಲಕ್ಷ್ಯದ ವಿರುದ್ಧ ಪ್ರತಿಭಟನೆ ಪ್ರದರ್ಶನ ನಡೆಸಿತು.

ಕಾರ್ಮಿಕರ ಶೋಷಣೆಗೆ ಕೊನೆ ಎಂದು ?

[ಮೊದಲನೆ ಪುಟದಿಂದ]

ತಮ್ಮ ಬೇಡಿಕೆಗಳು ಈಡೇರದ ಕಾರಣ ಜುಲೈ 1978ರ 24ರಂದು ಕಾರ್ಮಿಕರು 'ಧರಣಿ ಮುಷ್ಕರ' ನಡೆಸಿದರು. ಆದರೆ ತತ್‌ಕ್ಷಣದ ಪ್ರಯೋಜನ ಕಾಣಲಿಲ್ಲ. ಮುಖ್ಯಮಂತ್ರಿಯವರಿಗೆ ಮನವಿ ಸಲ್ಲಿಸಿದರು. 'ನೋಡು ವ,ಮಾಡುವ' ಭರವಸೆ ಮಾತ್ರ ದೊರೆಯಿತು. ಆದರೂ ಸಾರ್ವಜನಿಕರ ಬೆಂಬಲದೊಡನೆ ಕಾರ್ಮಿಕರ ಚಳುವಳಿ ಬಲಗೊಂಡಿತು. ದೇವಿಕಾರಾಣಿ-ಸಂಘದ ಮುಖಂಡರುಗಳನ್ನು ಕರೆಸಿ ಮಾತುಕತೆ ನಡೆಸಿ ಬೇಡಿಕೆ ಈಡೇರಿಕೆಯ ಆಶ್ವಾಸನೆ ಕೊಟ್ಟಳು. ಅಂತಯೇ ಆಗಸ್ಟ್ 9 ರಂದು ಮುಷ್ಕರ ಹಿಂತೆಗೆದುಕೊಂಡರು.

ದಿನಗಟ್ಟಲೆ, ತಿಂಗಳುಗಟ್ಟಲೆ ವರ್ಷಗಟ್ಟಲೆ ಕಾರ್ಮಿಕರು ಬೇಡಿಕೆ ಈಡೇರಿಕೆಗೆ ಕಣ್ಣು ತೆರೆದು ಕೂತರು. ಹೋರಾಟ ಅನಿವಾರ್ಯ ಎನಿಸಿತು. 1979ರ ಜುಲೈ 5ರಂದು ಕಾರ್ಮಿಕರು ಒಡೆಯರಿಗೆ, ಸರ್ಕಾರಕ್ಕೊಂದು ಪತ್ರ ಬರೆದು ಜುಲೈ 18ರ ಒಳಗೆ ತಮ್ಮ ಬೇಡಿಕೆ ಈಡೇರಿಸದೆ ಹೋದರೆ "ಅನಿರ್ಧಿಷ್ಟ ಕಾಲದ ಮುಷ್ಕರ" ಬೆದರಿಕೆ ಹಾಕಿದರು. ಈ ಕಾರ್ಮಿಕರ ಮನವಿಗೆ ಸರ್ಕಾರವಾಗಲಿ, ಒಡೆಯರಾಗಲಿ ಕಿವಿಗೊಡಲಿಲ್ಲ. ತಮ್ಮ ನಿರ್ಧಾರದಂತೆ ಕಾರ್ಮಿಕರು ಜುಲೈ 18 ರಂದು ಎಸ್ಟೇಟ್ ಗೇಟ್ ಮುಂಭಾಗ ಅನಿಧಿರ್ಷಕಾಲದ ಮುಷ್ಕರ ಆರಂಭಿಸಿದರು. ನ್ಯಾಯಬದ್ಧ ಬೇಡಿಕೆಗಳಿಗಾಗಿ ಹೋರಾಟ ಆರಂಭಿಸಿದ 68 ಮಂದಿ ಕಾರ್ಮಿಕರನ್ನು ಪೋಲೀಸರು ಬಂಧಿಸಿದರು. ಕಾರ್ಮಿಕ ಸಂಘದ ಮುಖಂಡ ಜಗನ್ನಾಥ್ ಮತ್ತು 50 ಮಂದಿ ಹರಿಜನ ಮಹಿಳಾ ಕಾರ್ಮಿಕರೂ ಬಂಧನಕ್ಕೊಳಗಾದರೂ. ಈಗ ಜಾಮೀನಿನ ಮೇಲೆ ಅವರನ್ನೆಲ್ಲ ಬಿಡುಗಡೆ ಮಾಡಲಾಗಿದೆ.

ಈಗ ಎಸ್ಟೇಟ್ ಒಡೆಯರ ಪರ ಸರ್ಕಾರ ಮತ್ತು ಪೋಲೀಸ್ ನಿಂತಿದ್ದು ಕಾರ್ಮಿಕ ವಿರೋಧಿ ನಿಲುವು ತಾಳಿದೆ. ಹರಿಜನರ ಉದ್ಧಾರವನ್ನು ಒಂದೆಡೆ ಜಪಿಸುವ ಸರ್ಕಾರದ ಈ ಇಬ್ಬಗೆಯ ನೀತಿಯಿಂದ ಬಡ ಹರಿಜನ ಕಾರ್ಮಿಕರು ಈಗ ಕಂಗಾಲಾಗಿದ್ದಾರೆ.

ಪ್ರಗತಿಪರ ಸಂಘ ಸಂಸ್ಥೆಗಳು ಕಣ್ಣು ತೆರೆದು ಈ ಶೋಷಿತ ಕಾರ್ಮಿಕರ ಹೋರಾಟಕ್ಕೆ ಆಣಿಯಾಗಬೇಕಾಗಿದೆ.

ಹೋರಾಟಮಾರ್ಗ ಹಿಡಿದ ಕಾರ್ಮಿಕರ ವಿರುದ್ಧ ಈಗಾಗಲೇ ಹಾಕಲಾಗಿರುವ ವಿನಾಕಾರಣ ಮೊಕದ್ದಮೆಯನ್ನು ಬೇಷರತ್ ಹಿಂತೆಗೆದುಕೊಳ್ಳಬೇಕೆಂದು ಮತ್ತು ಅವರಿಗಾಗಿರುವ ಅನ್ಯಾಯವನ್ನು ಸರಿಪಡಿಸಬೇಕೆಂದು ದಲಿತ ಸಂಘರ್ಷ ಸಮಿತಿ ಬೆಂಗಳೂರು ಶಾಖೆ ಒತ್ತಾಯಿಸಿದೆ.

•

ಸ್ವಾತಂತ್ರ್ಯ ದಲಿತರಿಗಲ್ಲ....

[ಮೊದಲನೆ ಪುಟದಿಂದ]

ಒಟ್ಟು ಸಾಗುವಳಿಯ ಮೂವತ್ತು ಕೋಟಿ ಎಕರೆ ಜಮೀನಿನಲ್ಲಿ ಕೇವಲ ಎಪ್ಪತ್ತು ಸಾವಿರ ಎಕರೆ ಜಮೀನನ್ನು ಮಾತ್ರ ಮರುಹಂಚಿಕೆ ಮಾಡಲಾಗಿದೆ.

ಇಂಡಿಯಾದ ಉದ್ದಗಲಕ್ಕೂ ದಲಿತರನ್ನು ಅಮಾನುಷವಾಗಿ ನಡೆಯಿಸಿಕೊಂಡಿರುವ ಘಟನೆಗಳ ಸರಮಾಲೆಯೇ ಇದೆ. ಬೆಲ್ಚಿ, ಜಂಷೆಡ್‌ಪುರ, ಪೂರ್ಣಿಯಾ ಜಿಲ್ಲೆ, ಕೈಲಾ ಬಿಸ್‌ರಾಂಪುರ, ಬಜಿತ್‌ಪುರ, ಮುಜಾಫರ್ ನಗರ ಮುಂತಾದ ಕಡೆ ನಡೆದ ಹತ್ಯಾಕಾಂಡಗಳು ಮತ್ತು ದಲಿತರ ಪರವಾಗಿಹೋರಾಡಿದ ಆರು ಮಂದಿ ದಲಿತರಿಗಾದ ಗಲ್ಲುಶಿಕ್ಷೆ ನಮ್ಮ ಮನಸ್ಸಿನಿಂದ ಮಾಸಿಲ್ಲ. ತಮಿಳುನಾಡಿನ ವಿಲ್ಲುಪುರಂ ಮತ್ತು ಉಂಜನೈ ಗ್ರಾಮದಲ್ಲಿ ಅಮಾನುಷ ಹೊಡೆತಕ್ಕೆ ಸಿಕ್ಕಿ ಐವರು ದಲಿತರು ಸತ್ತು ಅರವತ್ತಕ್ಕೂ ಹೆಚ್ಚು ಜನ ತೀವ್ರ ಗಾಯಗೊಂಡರು. ಕರ್ನಾಟಕದಲ್ಲೂ ದಲಿತರ ಮೇಲೆ, ಕೂಲಿಕಾರರ ಮೇಲೆ ಅಮಾನುಷ ಹಲ್ಲೆ ನಿರಂತರವಾಗಿ ನಡೆಯುತ್ತಿದೆ.

ಒಟ್ಟಿನಲ್ಲಿ ಸಾಮಾಜಿಕ ಆರ್ಥಿಕ ದಬ್ಬಾಳಿಕೆ ನಮ್ಮ ದೇಶದಲ್ಲಿ ಅಡೆ ತಡೆಯಿಲ್ಲದೆ ನಡೆದಿದೆ. ಇಂಥ ದಬ್ಬಾಳಿಕೆಯನ್ನು ತಡೆಗಟ್ಟದ, ಬಡವರ, ದಲಿತರ ಹಕ್ಕುಗಳನ್ನು ರಕ್ಷಣೆ ಮಾಡದ, ಎಲ್ಲ ಜನತೆಗೆ ಸಮಾನತೆಯ ಆಧಾರದ ಮೇಲೆ ಅನ್ನ, ವಸತಿ, ವಿದ್ಯೆ, ಉದ್ಯೋಗ ಕೊಡದ ಈ ದೇಶದ ಸ್ವಾತಂತ್ರ್ಯಕ್ಕೆ ಏನು ಅರ್ಥವಿದೆ ? ತೀರಾ ವ್ಯವಸ್ಥಿತವಾಗಿ ದಲಿತರು ಮತ್ತು ಎಲ್ಲ ರೀತಿಯ ಬಡವರ ಮೂಲಭೂತ ಹಕ್ಕುಗಳನ್ನು ಮನ್ನಿಸದಿರುವ ಈ ವ್ಯವಸ್ಥೆ ಬಂಡವಾಳಶಾಹಿ, ಪುರೋಹಿತಶಾಹಿ, ಭೂ ಮಾಲೀಕ ಮತ್ತಿತರ ಶೋಷಕ ವರ್ಗಕ್ಕೆ ವ್ಯಾಪಕ ಸ್ವಾತಂತ್ರ್ಯ ಕೊಟ್ಟಿದೆ. ಆದ್ದರಿಂದ ಸ್ವಾತಂತ್ರ್ಯ ದಿನಾಚರಣೆಯನ್ನು ಶೋಷಕ ವರ್ಗದವರು ಸಂತೋಷದಿಂದ ಆಚರಿಸಬೇಕಷ್ಟೆ. ಶೋಷಕ ವರ್ಗದ ಸಂತೋಷ ದಿನವೇ ನಮಗೆ 'ಕಪ್ಪು ದಿನ; ಶೋಷಣ ವಿರೋಧಿ ದಿನ.'

ಈ ಪತ್ರಿಕೆಯು ರಾಮದೇವ ರಾಕೆ ಅವರ ಸಂಪಾದಕತ್ವದಲ್ಲಿ, ನೂತನ್ ಪ್ರಿಂಟಿಂಗ್ ಪ್ರೆಸ್, ಬೆಂಗಳೂರು-3 ಇಲ್ಲಿ ಮುದ್ರಿಸಲ್ಪಟ್ಟು ಗೋವಿಂದಯ್ಯ ಅವರಿಂದ ಪ್ರಕಟಿಸಲ್ಪಟ್ಟಿತು. ವಿಳಾಸ : 5ಎ ವಾಣಿ ವಾಣಿಜ್ಯಶಾಲಾ, ಪತ್ರಕರ್ತರ ಕಾಲೋನಿ. ಬೆಂಗಳೂರು-560002.